# ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನತೆ) ಅಧಿನಿಯಮ, 1974

(ಕರ್ನಾಟಕ ರಾಜ್ಯಪತ್ರ, ಗುರುವಾರ ಜನವರಿ 10, 2008, ಭಾಗ – IVಎ, 51 ರಿಂದ 67ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಘೋಷಣೆ
3. ಪರಿಭಾಷೆಗಳು
4. ಕಂಪನಿಗಳ ಉದ್ಯಮಗಳು ಸರ್ಕಾರದಲ್ಲಿ ನಿಹಿತವಾಗುವುದು
5. ಕಂಪನಿಗಳಿಗೆ ನೀಡಬೇಕಾದ ಮೊಬಲಗು
6. ನಿಹಿತಗೊಳ್ಳುವುದರ ಸಾಮಾನ್ಯ ಪರಿಣಾಮ
7. ಮೊಬಲಗಿನಿಂದ ಮಾಡುವ ಕಡಿತಗಳು

7ಎ. ನ್ಯಾಯಮಂಡಳಿಗೆ ಅರ್ಜಿ

8. ಸ್ವಾಧೀನಪಡಿಸಿಕೊಂಡ ಸ್ವತ್ತಿನ ಮತ್ತು ಅದಕ್ಕೆ ಸಂಬಂಧಿಸಿದ ದಸ್ತಾವೇಜುಗಳ ಸ್ವಾಧೀನತೆಯನ್ನು ವಹಿಸಿಕೊಡುವ ಕರ್ತವ್ಯ
9. ವಿವರಗಳನ್ನು ಒದಗಿಸುವುದು ಕಂಪನಿಯ ಕರ್ತವ್ಯ
10. ಕೆಲವು ಒಪ್ಪಂದಗಳನ್ನು ನಿರಾಕರಿಸಲು ಸರ್ಕಾರದ ಹಕ್ಕು
11. ಕಂಪನಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು
12. ಭವಿಷ್ಯ ನಿಧಿ ಮತ್ತು ಇತರ ನಿಧಿಗಳು
13. ಆಸ್ತಿಗಳ ಅಪವ್ಯಯಕ್ಕೆ ಕಾರಣವಾಗುವ ವ್ಯವಹಾರ
14. ನ್ಯಾಯ ಮಂಡಳಿಯ ರಚನೆ ಮತ್ತು ಅಧಿಕಾರಗಳು
15. ದಂಡನೆಗಳು
16. ಕಂಪನಿಗಳಿಂದ ಅಪರಾಧಗಳು
17. ಅಧಿನಿಯಮದ ಅಡಿಯಲ್ಲಿ ಕೈಗೊಂಡ ಕ್ರಮದ ರಕ್ಷಣೆ
18. ನಿಯಮಗಳನ್ನು ರಚಿಸಲು ಅಧಿಕಾರ
19. ತೊಂದರೆಗಳನ್ನು ನಿವಾರಿಸಲು ಅಧಿಕಾರ
20. ನಿಯಮಗಳನ್ನು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು
21. ಇತರ ಕಾನೂನುಗಳ ಪರಿಣಾಮ
22. ಸ್ವಇಚ್ಛೆಯಿಂದ ಸರ್ಕಾರಕ್ಕೆ ವಹಿಸಿದ ಉದ್ಯಮಕ್ಕೆ ಅಧಿನಿಯಮವು ಅನ್ವಯಿಸುವುದು

ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳು

I

**1974ರ ಅಧಿನಿಯಮ 36.–** ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ 3ನೇ ಪ್ರಕರಣದ ಅಡಿಯಲ್ಲಿ ಹಿಂದಿನ ಮುಂಬೈ ಸರ್ಕಾರವು ಅವುಗಳಿಗೆ ನೀಡಿದ್ದ ಲೈಸೆನ್ಸ್‌ಗಳ ಅಡಿಯಲ್ಲಿ ರಾಜ್ಯದ ಬೆಳಗಾವಿ ವಿಭಾಗದಲ್ಲಿನ ಆಯಾಯ ಉದ್ಯಮಗಳಿಗೆ ಲೈಸೆನ್ಸ್ ನೀಡಲಾಗಿರುವ ಪ್ರದೇಶದಲ್ಲಿ ಏಳು ಖಾಸಗಿ ವಿದ್ಯುತ್ ಉದ್ಯಮಗಳು ಪ್ರಸ್ತುತ ವಿದ್ಯುತ್ ವಿತರಣೆ ಮತ್ತು ಸರಬರಾಜಿನಲ್ಲಿ ತೊಡಗಿವೆ. ಇವುಗಳ ಜೊತೆಗೆ, ಭಾರತ ಸರ್ಕಾರದ ಪ್ರಾಯೋಗಿಕ ಯೋಜನೆಯ ಅಡಿಯಲ್ಲಿ ಸ್ಥಾಪಿಸಲಾದ ಒಂದು ಸಹಕಾರ ಸಂಘಕ್ಕೆ ಸಹ ರಾಜ್ಯದ ಹುಕ್ಕೇರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಿಸಲು ಭಾರತ ವಿದ್ಯುಚ್ಛಕ್ತಿ ಅಧಿನಿಯಮದ ಅಡಿಯಲ್ಲಿ ಅಧಿಕಾರ ನೀಡಲಾಗಿದೆ. ಹಿಂದಿನ ಮುಂಬೈ ಸರ್ಕಾರ ಏಳು ಖಾಸಗಿ ವಿದ್ಯುತ್ ಉದ್ಯಮಗಳಿಗೆ ಮಂಜೂರು ಮಾಡಿದ ಲೈಸೆನ್ಸ್‌ಗಳ ಅವಧಿಯು 30 ರಿಂದ 40 ವರ್ಷಗಳಾಗಿದ್ದು, ಅವು ಮುಕ್ತಾಯವಾದಂತೆಲ್ಲಾ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯು ಭಾರತ ವಿದ್ಯುಚ್ಛಕ್ತಿ ಅಧಿನಿಯಮದ 6ನೇ ಪ್ರಕರಣದ ಉಪಬಂಧದ ಅಡಿಯಲ್ಲಿ ಲೈಸೆನ್ಸ್‌ದಾರರಿಗೆ ಲಿಖಿತದಲ್ಲಿ ಅವಶ್ಯ ನೋಟೀಸ್ ನೀಡಿದ ತರುವಾಯ ಉದ್ಯಮಗಳನ್ನು ಖರೀದಿಸುವ ಆಯ್ಕೆಯ ಅವಕಾಶವನ್ನು ಹೊಂದಿದೆ ಮತ್ತು ಲೈಸೆನ್ಸ್‌ದಾರರು ತಮ್ಮ ಉದ್ಯಮಗಳನ್ನು ಮಂಡಳಿಗೆ ಮಾರಾಟ ಮಾಡಬೇಕಾಗುತ್ತದೆ.

ಗ್ರಾಮೀಣ ಪ್ರದೇಶಗಳ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರವು ಗ್ರಾಮೀಣ ವಿದ್ಯುದೀಕರಣ ಯೋಜನೆಗೆ ಪ್ರಾಮುಖ್ಯತೆ ನೀಡುವುದರೊಂದಿಗೆ, ಲೈಸೆನ್ಸ್ ನೀಡಿರುವ ಪ್ರದೇಶದ ಗ್ರಾಮೀಣ ಭಾಗಗಳಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸಲು ಲೈಸೆನ್ಸ್‌ದಾರರಿಗೆ ಸಾಧ್ಯವಾಗುತ್ತಿಲ್ಲ ಎಂದು ಮತ್ತು ಮಂಡಳಿಯು ತನ್ನ ವ್ಯಾಪಕ ಸ್ವರೂಪದ ಸಂಘಟನಾತ್ಮಕ ಮತ್ತು ಭೌತಿಕ ಸಂಪನ್ಮೂಲಗಳನ್ನು ವಿನಿಯೋಗಿಸಿ ಈ ಪ್ರದೇಶದಲ್ಲಿನ ಗ್ರಾಹಕರ ಹಿತಾಸಕ್ತಿಯನ್ನು ಉತ್ತಮವಾಗಿ ಕಾಪಾಡಬಹುದೆಂದು ಕಂಡುಬಂದಿದೆ. ಬದಲಾಗಿರುವ ಪ್ರಸ್ತುತ ಸನ್ನಿವೇಶಗಳಲ್ಲಿ, ಶಾಸನಬದ್ಧ ವಿದ್ಯುಚ್ಛಕ್ತಿ ಮಂಡಳಿಯು ತನಗೆ ವಹಿಸಿರುವ ಕೆಲಸವನ್ನು ರಾಜ್ಯದಲ್ಲಿ ಸಮರ್ಥವಾಗಿ ನಿರ್ವಹಿಸುತ್ತಿರುವಾಗ ಅದೇ ಕೆಲಸದ ನಿರ್ವಹಣೆಯನ್ನು ಖಾಸಗೀ ಲೈಸೆನ್ಸ್‌ದಾರರಿಗೆ ವಹಿಸುವುದು ಆರೋಗ್ಯಕರ ಕ್ರಮವಲ್ಲವೆಂಬುದಾಗಿಯೂ ಪರಿಗಣಿಸಲಾಗಿದೆ. ಈ ಅಸಂಗತ ಸನ್ನಿವೇಶವನ್ನು ಹೋಗಲಾಡಿಸಲು, ಎಲ್ಲ ಖಾಸಗೀ ವಿದ್ಯುತ್ ಉದ್ಯಮಗಳನ್ನು ವಿಶೇಷ ಶಾಸನದ ಮೂಲಕ ವಹಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹೀಗೆ ಮಾಡುವುದರಿಂದ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ವಿದ್ಯುಚ್ಛಕ್ತಿಯನ್ನು ಪೂರೈಸುತ್ತಿರುವ ಇತರ ಪ್ರದೇಶಗಳಲ್ಲಿರುವಂತೆ ಸಂಬಂಧಪಟ್ಟ ಲೈಸೆನ್ಸ್ ನೀಡಿರುವ ಪ್ರದೇಶದಲ್ಲೂ ಗ್ರಾಹಕರಿಗೆ ವಿದ್ಯುತ್ ಸರಬರಾಜು ಸುಗಮವಾಗುತ್ತದೆ ಮತ್ತು ತೃಪ್ತಿಕರವಾಗುತ್ತದೆ.

ಆ ಪ್ರಕಾರ ಎಲ್ಲ ಏಳು ಖಾಸಗಿ ವಿದ್ಯುತ್ ಉದ್ಯಮಗಳನ್ನು ವಹಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 13.5.1974ರ ಕರ್ನಾಟಕ ರಾಜ್ಯಪತ್ರದ (ವಿಶೇಷ) ಭಾಗ IV–2ಎ, ಪುಟ 22 ರಲ್ಲಿ ಸಂಖ್ಯೆ 789 ಎಂದು ಪ್ರಕಟಿಸಲಾಗಿದೆ.)

II

**1976ರ ತಿದ್ದುಪಡಿ ಮಾಡುವ ಅಧಿನಿಯಮ 5.–** ಈ ಅಧಿನಿಯಮದ 13ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ತಿಳಿಸಲಾಗಿರುವ ಯಾವುದೇ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಅವು ಸರ್ಕಾರದ ಅಭಿಪ್ರಾಯದಲ್ಲಿ, ಸಮಂಜಸವಲ್ಲದವುಗಳು ಅಥವಾ ಮುಂದಾಲೋಚನೆಯಿಲ್ಲದವುಗಳು ಎಂದು ಕಂಡುಬಂದಾಗ, 14ನೇ ಪ್ರಕರಣದ ಅಡಿಯಲ್ಲಿ ರಚಿತವಾಗುವ ನ್ಯಾಯ ಮಂಡಳಿಗೆ ನಿಹಿತಗೊಳಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು 13ನೇ ಪ್ರಕರಣದ (2)ನೇ ಉಪಪ್ರಕರಣವು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಈ ಅಧಿನಿಯಮದ ಸಿಂಧುತ್ವವನ್ನು ಪ್ರಶ್ನಿಸಿ ಹಾಗೂ ಸರ್ಕಾರವು ವಹಿಸಿಕೊಂಡ ಉದ್ಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ವಿರುದ್ಧ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ರಿಟ್ ಅರ್ಜಿಗಳನ್ನು ಅಂಗೀಕರಿಸಿದ ಉಚ್ಚನ್ಯಾಯಾಲಯವು ತಡೆಯಾಜ್ಞೆಯನ್ನು ಸಹ ನೀಡಿತ್ತು. ತಡೆಯಾಜ್ಞೆಯ ವಿರುದ್ಧ ರಾಜ್ಯ ಸರ್ಕಾರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳೆರಡೂ ಅಪೀಲುಗಳನ್ನು ಸಲ್ಲಿಸಿದ್ದವು. ಕೆಲವು ನಿರ್ಬಂಧಗಳನ್ನು ವಿಧಿಸಿ ಸದರಿ ಅಪೀಲುಗಳನ್ನು ಅಂಗೀಕರಿಸಲಾಗಿತ್ತಾದರೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉದ್ಯಮದ ಸ್ವಾಧೀನತೆ ಹೊಂದಿರುವುದನ್ನು ಬದಲಾಯಿಸಲಿಲ್ಲ.

ನಿಹಿತಗೊಳಿಸಿದ ದಿನಾಂಕದ ನಿಕಟ ತರುವಾಯ ಹೂಡಿದ ವ್ಯಾಜ್ಯಗಳ ಪರಿಣಾಮವಾಗಿ ಬಹುಪಾಲು ಮಾಜಿ ಲೈಸನ್ಸುದಾರರು ಸರ್ಕಾರದಲ್ಲಿ ನಿಹಿತಗೊಂಡಿದ್ದ ಉದ್ಯಮಗಳಿಗೆ ಸಂಬಂಧಿಸಿದ ಎಲ್ಲ ದಸ್ತಾವೇಜುಗಳನ್ನು ಒಪ್ಪಿಸಲಿಲ್ಲ ಮತ್ತು ಇತರರು ಕೆಲವೇ ದಸ್ತಾವೇಜುಗಳನ್ನು ಒಪ್ಪಿಸಿದರು ಹಾಗೂ ಉಚ್ಚ ನ್ಯಾಯಾಲಯವು ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ಉದ್ಯಮಗಳ ಎಲ್ಲ ಸ್ವತ್ತುಗಳನ್ನು ಮತ್ತು ದಸ್ತಾವೇಜುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿನಿಯಮದ 8ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೂ ಸಾಧ್ಯವಾಗಲಿಲ್ಲ. ಆದುದರಿಂದ, 13ನೇ ಪ್ರಕರಣದ ಅಡಿಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಇದ್ದ ಕಾಲಪರಿಮಿತಿ ಅವಧಿಯನ್ನು ಒಂದು ವರ್ಷದಿಂದ ಎರಡು ವರ್ಷಗಳಿಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಯಿತು.

(1976ರ ವಿ.ಸ. ವಿಧೇಯಕ ಸಂಖ್ಯೆ 3 ರಿಂದ ಪಡೆಯಲಾಗಿದೆ)

(ದಿನಾಂಕ 22.1.1976ರ ಕರ್ನಾಟಕ ರಾಜ್ಯಪತ್ರದಲ್ಲಿ ಪುಟ 27ರಲ್ಲಿ ಅಧಿಸೂಚನೆ ಸಂಖ್ಯೆ 10884 ಎಲ್ಎ ದಿನಾಂಕ 20.1.1976 ಎಂದು ಪ್ರಕಟಿಸಲಾಗಿದೆ.)

**III**

**1977ರ ತಿದ್ದುಪಡಿ ಮಾಡುವ ಅಧಿನಿಯಮ 6.–** ಈ ಅಧಿನಿಯಮದ 13ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ತಿಳಿಸಲಾಗಿರುವ ಯಾವುದೇ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಅವು ಸರ್ಕಾರದ ಅಭಿಪ್ರಾಯದಲ್ಲಿ ಸಮಂಜಸವಲ್ಲದವುಗಳು ಅಥವಾ ಮುಂದಾಲೋಚನೆಯಿಲ್ಲದವುಗಳು ಎಂದು ಕಂಡುಬಂದಾಗ, 14ನೇ ಪ್ರಕರಣದ ಅಡಿಯಲ್ಲಿ ರಚಿತವಾಗುವ ನ್ಯಾಯ ಮಂಡಳಿಗೆ ನಿಹಿತಗೊಳಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು 13ನೇ ಪ್ರಕರಣದ (2)ನೇ ಉಪಪ್ರಕರಣವು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಈ ಅಧಿನಿಯಮದ ಸಿಂಧುತ್ವವನ್ನು ಪ್ರಶ್ನಿಸಿ ಹಾಗೂ ಸರ್ಕಾರವು ವಹಿಸಿಕೊಂಡ ಉದ್ಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ರಿಟ್ ಅರ್ಜಿಗಳನ್ನು ಅಂಗೀಕರಿಸಿದ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ಸಹ ನೀಡಿತ್ತು. ತಡೆಯಾಜ್ಞೆಯ ವಿರುದ್ಧ ರಾಜ್ಯ ಸರ್ಕಾರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳೆರಡೂ ಅಪೀಲುಗಳನ್ನು ಸಲ್ಲಿಸಿದ್ದವು. ಕೆಲವು ನಿರ್ಬಂಧಗಳನ್ನು ವಿಧಿಸಿ ಸದರಿ ಅಪೀಲುಗಳನ್ನು ಅಂಗೀಕರಿಸಲಾಗಿತ್ತಾದರೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉದ್ಯಮದ ಸ್ವಾಧೀನತೆ ಹೊಂದಿರುವುದನ್ನು ಬದಲಾಯಿಸಲಿಲ್ಲ.

ನಿಹಿತಗೊಳಿಸಿದ ದಿನಾಂಕದ ನಿಕಟ ತರುವಾಯ ಹೂಡಿದ ವ್ಯಾಜ್ಯಗಳ ಪರಿಣಾಮವಾಗಿ ಬಹುಪಾಲು ಮಾಜಿ ಲೈಸೆನ್ಸುದಾರರು ಸರ್ಕಾರದಲ್ಲಿ ನಿಹಿತಗೊಂಡಿದ್ದ ಉದ್ಯಮಗಳಿಗೆ ಸಂಬಂಧಿಸಿದ ಎಲ್ಲ ದಸ್ತಾವೇಜುಗಳನ್ನು ಒಪ್ಪಿಸಲಿಲ್ಲ ಮತ್ತು ಇತರರು ಕೆಲವೇ ದಸ್ತಾವೇಜುಗಳನ್ನು ಒಪ್ಪಿಸಿದರು ಹಾಗೂ ಉಚ್ಚ ನ್ಯಾಯಾಲಯವು ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ಉದ್ಯಮಗಳ ಎಲ್ಲ ಸ್ವತ್ತುಗಳನ್ನು ಮತ್ತು ದಸ್ತಾವೇಜುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿನಿಯಮದ 8ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೂ ಸಾಧ್ಯವಾಗಲಿಲ್ಲ.

ಆದುದರಿಂದ, 13ನೇ ಪ್ರಕರಣದ ಅಡಿಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಇದ್ದ ಕಾಲಪರಿಮಿತಿ ಅವಧಿಯನ್ನು ಎರಡು ವರ್ಷಗಳಿಂದ ಮೂರು ವರ್ಷಗಳಿಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಯಿತು.

ಈ ಸನ್ನಿವೇಶಗಳಲ್ಲಿ ಒಂದು ಅಧ್ಯಾದೇಶವನ್ನು ಹೊರಡಿಸಲಾಗಿತ್ತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ತರಲಾಗಿದೆ.

(ದಿನಾಂಕ 28.3.1977ರ ಕರ್ನಾಟಕ ರಾಜ್ಯಪತ್ರದ (ವಿಶೇಷ) ಭಾಗ IV-2ಎ, ಪುಟ ಸಂಖ್ಯೆ 2.–3ರಲ್ಲಿ ಸಂಖ್ಯೆ 238 ಎಂದು ಪ್ರಕಟಿಸಲಾಗಿದೆ.)

**IV**

**1978ರ ತಿದ್ದುಪಡಿ ಮಾಡುವ ಅಧಿನಿಯಮ 23.–** ಈ ಅಧಿನಿಯಮದ 13ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ತಿಳಿಸಲಾಗಿರುವ ಯಾವುವೇ ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಅವು ಸರ್ಕಾರದ ಅಭಿಪ್ರಾಯದಲ್ಲಿ ಸಮಂಜಸವಲ್ಲದವುಗಳು ಅಥವಾ ಮುಂದಾಲೋಚನೆಯಿಲ್ಲದವುಗಳು ಎಂದು ಕಂಡುಬಂದಾಗ 14ನೇ ಪ್ರಕರಣದ ಅಡಿಯಲ್ಲಿ ರಚಿತವಾಗುವ ನ್ಯಾಯ ಮಂಡಳಿಗೆ ನಿಹಿತಗೊಳಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು 13ನೇ ಪ್ರಕರಣದ (2)ನೇ ಉಪಪ್ರಕರಣವು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಈ ಅಧಿನಿಯಮದ ಸಿಂಧುತ್ವವನ್ನು ಪ್ರಶ್ನಿಸಿ ಹಾಗೂ ಸರ್ಕಾರವು ವಹಿಸಿಕೊಂಡ ಉದ್ಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ರಿಟ್ ಅರ್ಜಿಗಳನ್ನು ಅಂಗೀಕರಿಸಿದ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ಸಹ ನೀಡಿತ್ತು. ತಡೆಯಾಜ್ಞೆಯ ವಿರುದ್ಧ ರಾಜ್ಯ ಸರ್ಕಾರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳೆರಡೂ ಅಪೀಲುಗಳನ್ನು ಸಲ್ಲಿಸಿದ್ದವು. ಕೆಲವು ನಿರ್ಬಂಧಗಳನ್ನು ವಿಧಿಸಿ ಸದರಿ ಅಪೀಲುಗಳನ್ನು ಅಂಗೀಕರಿಸಲಾಗಿತ್ತಾದರೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉದ್ಯಮದ ಸ್ವಾಧೀನತೆ ಹೊಂದಿರುವುದನ್ನು ಬದಲಾಯಿಸಲಿಲ್ಲ.

ನಿಹಿತಗೊಳಿಸಿದ ದಿನಾಂಕದ ನಿಕಟ ತರುವಾಯ ಹೂಡಿದ ವ್ಯಾಜ್ಯಗಳ ಪರಿಣಾಮವಾಗಿ, ಬಹುಪಾಲು ಮಾಜಿ ಲೈಸೆನ್ಸುದಾರರು ಸರ್ಕಾರದಲ್ಲಿ ನಿಹಿತಗೊಂಡಿದ್ದ ಉದ್ಯಮಗಳಿಗೆ ಸಂಬಂಧಿಸಿದ ಎಲ್ಲ ದಸ್ತಾವೇಜುಗಳನ್ನು ಒಪ್ಪಿಸಲಿಲ್ಲ ಮತ್ತು ಇತರರು ಕೆಲವೇ ದಸ್ತಾವೇಜುಗಳನ್ನು ಒಪ್ಪಿಸಿದರು ಹಾಗೂ ಉಚ್ಚ ನ್ಯಾಯಾಲಯವು ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ಉದ್ಯಮಗಳ ಎಲ್ಲ ಸ್ವತ್ತುಗಳನ್ನು ಮತ್ತು ದಸ್ತಾವೇಜುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಧಿನಿಯಮದ 8ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೂ ಸಾಧ್ಯವಾಗಲಿಲ್ಲ. ಆದುದರಿಂದ, 13ನೇ ಪ್ರಕರಣದ ಅಡಿಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಇದ್ದ ಕಾಲಪರಿಮಿತಿ ಅವಧಿಯನ್ನು ಮೂರು ವರ್ಷಗಳಿಂದ ಐದು ವರ್ಷಗಳಿಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಯಿತು.

ಆದ್ದರಿಂದ ಈ ವಿಧೇಯಕ.

(ದಿನಾಂಕ 9.8.1978ರ ಕರ್ನಾಟಕ ರಾಜ್ಯಪತ್ರದ (ವಿಶೇಷ) ಭಾಗ IV-2ಎ, ಪುಟ 3ರಲ್ಲಿ ಸಂಖ್ಯೆ 1128 ಎಂದು ಪ್ರಕಟಿಸಲಾಗಿದೆ.)

**V**

**1981ರ ತಿದ್ದುಪಡಿ ಮಾಡುವ ಅಧಿನಿಯಮ 14.–** ಸರ್ಕಾರವು, ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮ (ಸ್ವಾಧೀನ) ಅಧಿನಿಯಮ, 1974ರ ಮೂಲಕ ಯಾವ ಏಳು ಖಾಸಗಿ ವಿದ್ಯುತ್ ಕಂಪನಿಗಳನ್ನು ವಹಿಸಿಕೊಂಡಿತೋ ಅವುಗಳ ಸ್ವಾಧೀನತೆಗಾಗಿ ಪಾವತಿ ಮಾಡಬೇಕಾದ ಮೊಬಲಗನ್ನು ಸ್ವತ್ತುಗಳ ಪುಸ್ತಕ ಮೌಲ್ಯದ ಆಧಾರದ ಮೇಲೆ ನಿರ್ಧರಿಸಲಾಗಿದೆ. ಸಮಾಧಾನಾರ್ಥ ಪರಿಹಾರದ ಹಣವನ್ನು ಸಂದಾಯ ಮಾಡಲು ಈ ಅಧಿನಿಯಮದಲ್ಲಿ ಈಗ ಯಾವುದೇ ಉಪಬಂಧವಿಲ್ಲ.

ಸಾಮಾನ್ಯವಾಗಿ, ಸ್ವಾಧೀನತೆಗಳ ಸಂದರ್ಭದಲ್ಲಿ ಆ ಸ್ವಾಧೀನತೆಗಳ ಕಡ್ಡಾಯ ಸ್ವರೂಪದ ದೃಷ್ಟಿಯಿಂದಾಗಿ ಸಮಾಧಾನಾರ್ಥ ಪರಿಹಾರದ ಹಣವನ್ನು ಸಂದಾಯ ಮಾಡಲಾಗುತ್ತದೆ. ಅಂಥ ಸಮಾಧಾನಾರ್ಥ ಪರಿಹಾರ ಹಣದ ಸಂದಾಯಕ್ಕಾಗಿ ಇತರ ಹಲವು ರಾಜ್ಯಗಳಲ್ಲಿ ಸದೃಶ ಶಾಸನಗಳನ್ನು ರಚಿಸಲಾಗಿದೆ. ಈ ಸನ್ನಿವೇಶಗಳಲ್ಲಿ ಮತ್ತು ಕಂಪನಿಗಳು ಮಾಡಿಕೊಂಡ ಮನವಿಯನ್ನು ಪರಿಗಣಿಸಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಮೂಲಕ ಶೇಕಡಾ ಹತ್ತರಷ್ಟು ಸಮಾಧಾನಾರ್ಥ ಹಣ ಸಂದಾಯಕ್ಕೆ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 3.2.1981ರ ಕರ್ನಾಟಕ ರಾಜ್ಯಪತ್ರದ (ವಿಶೇಷ) ಭಾಗ-IV 2ಎ, ಪುಟ–3ರಲ್ಲಿ ಸಂಖ್ಯೆ 101 ಎಂದು ಪ್ರಕಟಿಸಲಾಗಿದೆ.)

**VI**

**1995ರ ತಿದ್ದುಪಡಿ ಮಾಡುವ ಅಧಿನಿಯಮ 9.–** ಕರ್ನಾಟಕ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ 6761/1974 ಮತ್ತು 6762/1974ರಲ್ಲಿ ಅದು ನೀಡಿದ ಆದೇಶದಲ್ಲಿ, ಅಧಿನಿಯಮದ ಉಪಬಂಧಗಳಿಂದ, ಅದರಲ್ಲೂ ವಿಶೇಷವಾಗಿ 5, 6, ಮತ್ತು 7ನೇ ಪ್ರಕರಣಗಳ ಉಪಬಂಧಗಳಿಂದಾಗಿ ಉದ್ಭವಿಸುವ ವಿವಾದದ ನಿರ್ಣಯಕ್ಕಾಗಿ ಯಾವುದಾದರೊಂದು ವ್ಯವಸ್ಥೆ ಅಥವಾ ನ್ಯಾಯ ನಿರ್ಣಾಯಕ ವೇದಿಕೆಗಾಗಿ ಅಧಿನಿಯಮದಲ್ಲಿ ಯಾವುದೇ ಉಪಬಂಧ ಕಲ್ಪಿಸಿಲ್ಲವಾದ್ದರಿಂದ ಅಧಿನಿಯಮವು ಜಾರಿಗೊಳಿಸಲಾಗದಂಥದ್ದು ಎಂಬ ಕಾರಣದ ಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 36)ನ್ನು ರದ್ದುಪಡಿಸಿತು. ವಿಷಯವು ಈಗ, ಸಿವಿಲ್ ಅಪೀಲು ಸಂ. 2573/74/1982ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದೆ ಮತ್ತು ಸದ್ಯದಲ್ಲಿ ಅಂತಿಮ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಆದುದರಿಂದ, 5,6 ಮತ್ತು 7ನೇ ಪ್ರಕರಣಗಳಿಂದ ಉದ್ಭವಿಸುವ ವಿವಾದಗಳಿಗೆ ಸಂಬಂಧಿಸಿದಂತೆ 14ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಕಲ್ಪಿಸಲು ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈ ವಿಷಯವು ತುರ್ತುಸ್ವರೂಪದ್ದಾಗಿದ್ದು ಕರ್ನಾಟಕ ವಿಧಾನಮಂಡಲವು ಅಧಿವೇಶನದಲ್ಲಿ ಇಲ್ಲದಿರುವುದರಿಂದ, ಮೇಲ್ಕಂಡ ಉದ್ದೇಶದ ಸಾಧನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ನಿಗಮ (ಸ್ವಾಧೀನ) (ತಿದ್ದುಪಡಿ) ಅಧ್ಯಾದೇಶ, 1995ನ್ನು ಹೊರಡಿಸಲಾಗಿತ್ತು.

ಆದ್ದರಿಂದ ಈ ವಿಧೇಯಕ.

(1995ರ ವಿ.ಸ. ವಿಧೇಯಕ ಸಂಖ್ಯೆ 7 ರಿಂದ ಪಡೆಯಲಾಗಿದೆ.)

**1974ರ ಕರ್ನಾಟಕ ಅಧಿನಿಯಮ ಸಂಖ್ಯೆ 36**

(ಹದಿನೇಳನೇ ಡಿಸೆಂಬರ್ 1974ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ.)

# ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನತೆ) ಅಧಿನಿಯಮ, 1974

(ಹನ್ನೆರಡನೇ ಡಿಸೆಂಬರ್, 1974ರಂದು ರಾಷ್ಟ್ರಪತಿಯ ಸಮ್ಮತಿ ಪಡೆದಿದೆ.)

(1976ರ 5, 1977ರ 6, 1978ರ 23, 1981ರ 14, 1995ರ 9ರ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

**ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯ ಉತ್ತಮ ಸರಬರಾಜನ್ನು ಖಚಿತಪಡಿಸುವ ಉದ್ದೇಶಕ್ಕಾಗಿ, ವಿದ್ಯುತ್ ಸರಬರಾಜು ಮಾಡುತ್ತಿರುವ ಕರ್ನಾಟಕ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಉದ್ಯಮಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.**

ಸಾರ್ವಜನಿಕರಿಗೆ ವಿದ್ಯುಚ್ಛಕ್ತಿಯ ಉತ್ತಮ ಸರಬರಾಜನ್ನು ಖಚಿತಪಡಿಸುವ ಉದ್ದೇಶಕ್ಕಾಗಿ, ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 (ಕೇಂದ್ರಾಧಿನಿಯಮ 1948ರ LIV)ರ 5ನೇ ಪ್ರಕರಣದ ಅಡಿಯಲ್ಲಿ ರಚಿತವಾದ (ಎ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸೇರಿದ ಮತ್ತು ಅದರ ಅಡಿಯಲ್ಲಿ ಬರುವಂತಹ ಉದ್ಯಮಗಳನ್ನು ಮತ್ತು (ಬಿ) ಒಂದು ಸಹಕಾರ ಸಂಘವನ್ನು ಹೊರತುಪಡಿಸಿ, ಸಾರ್ವಜನಿಕರಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಕರ್ನಾಟಕ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಉದ್ಯಮಗಳನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಆನುಷಂಗಿಕವಾದ ವಿಷಯಗಳ ಬಗೆಗೆ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನತೆ) ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಇದು ಜಾರಿಗೆ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆಯ ಮೂಲಕ 18.12.1974ರಂದು ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

**2. ಘೋಷಣೆ.-** ಭಾರತ ಸಂವಿಧಾನದ 31ಸಿ ಅನುಚ್ಛೇದದ ಅನುಸಾರ, ಸಂವಿಧಾನದ 39ನೇ ಅನುಚ್ಛೇದದ (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ತತ್ವಗಳ ಪಾಲನೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ರಾಜ್ಯದ ನೀತಿಯು ಪರಿಣಾಮಕಾರಿಯಾಗುವಂತೆ ಮಾಡಲು ಈ ಅಧಿನಿಯಮದ ಉಪಬಂಧಗಳನ್ನು ಅಧಿನಿಯಮಿಸಲಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

**3. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಲೆಕ್ಕ ವರ್ಷ" ಎಂದರೆ, ಕಂಪನಿಯ ಹಣಕಾಸು ವರ್ಷ ಎಂದು ಅರ್ಥ;

(2) "ವಾರ್ಷಿಕ ಲೆಕ್ಕ" ಎಂದರೆ, ವಿದ್ಯುಚ್ಛಕ್ತಿ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅನುಸಾರವಾಗಿ ಪ್ರತಿವರ್ಷ ಸರ್ಕಾರಕ್ಕೆ ಸಲ್ಲಿಸಿದ ಉದ್ಯಮದ ಲೆಕ್ಕ ಅಥವಾ ಆ ಅಧಿನಿಯಮದ ಅಡಿಯಲ್ಲಿ ಅಂಥ ಯಾವುದೇ ಲೆಕ್ಕವನ್ನು ಸಲ್ಲಿಸಬೇಕಾಗಿಲ್ಲದಿದ್ದಲ್ಲಿ, ಉದ್ಯಮದ ಲೆಕ್ಕವನ್ನು ಸಾಮಾನ್ಯವಾಗಿ ಉದ್ಯಮದ ಲೆಕ್ಕ ವರ್ಷಕ್ಕೆ ಸಿದ್ಧಪಡಿಸಿದ ಮತ್ತು ಚಾರ್ಟರ್ಡ್

ಅಕೌಂಟೆಂಟ್ ಅಧಿನಿಯಮ, 1949 (ಕೇಂದ್ರ ಅಧಿನಿಯಮ 1949ರ XXXVIII)ರ ಅರ್ಥವ್ಯಾಪ್ತಿಯಲ್ಲಿ ಬರುವ ವೃತ್ತಿನಿರತ ಲೆಕ್ಕ ಪರಿಶೋಧಕನು ಪರಿಶೋಧಿಸಿದ ಉದ್ಯಮದ ಲೆಕ್ಕ ಎಂದು ಅರ್ಥ;

(3) "ಗೊತ್ತುಪಡಿಸಿದ ದಿನಾಂಕ" ಎಂದರೆ, 1ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಡಿಯಲ್ಲಿ ನಿಯಮಿಸಿದ ದಿನಾಂಕ ಎಂದು ಅರ್ಥ;

(4) "ಮಂಡಳಿ" ಎಂದರೆ, ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ, 1948ರ (ಕೇಂದ್ರ ಅಧಿನಿಯಮ, 1948ರ LIV) 5ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂದು ಅರ್ಥ;

(5) "ಕಂಪನಿಗಳು" ಎಂದರೆ, ಸಂಯೋಜಿತ ವಿದ್ಯುಚ್ಛಕ್ತಿ ಕಂಪನಿ ನಿಯಮಿತ, ಬೆಳಗಾವಿ. ನಿಪ್ಪಾಣಿ ವಿದ್ಯುಚ್ಛಕ್ತಿ ಕಂಪನಿ ನಿಯಮಿತ, ನಿಪ್ಪಾಣಿ, ಕಾರವಾರ ವಿದ್ಯುಚ್ಛಕ್ತಿ ಸರಬರಾಜು ಮತ್ತು ಟ್ರೇಡಿಂಗ್ ಕಂಪನಿ ನಿಯಮಿತ, ಕಾರವಾರ, ಕೆನರಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಸಿರಸಿ ಎಂದು ಅರ್ಥ ಮತ್ತು ಅದರಲ್ಲಿ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವ್ಯವಹಾರದಲ್ಲಿ ತೊಡಗಿರುವ ಈ ಮುಂದಿನ ಸಂಸ್ಥೆಗಳು ಒಳಗೊಳ್ಳುತ್ತವೆ, ಎಂದರೆ:–

(ಎ) ಮಾನ್ವಿ ಬ್ರದರ್ಸ್, ಗದಗ;

(ಬಿ) ಮಾನ್ವಿ ಬ್ರದರ್ಸ್, ಬ್ಯಾಡಗಿ;

(ಸಿ) ಮಾನ್ವಿ ಬ್ರದರ್ಸ್, ರಾಣಿಬೆನ್ನೂರು; ಮತ್ತು 'ಕಂಪನಿ' ಎಂದರೆ ಮೇಲೆ ತಿಳಿಸಲಾದ ಯಾವುದೇ ಕಂಪನಿ ಎಂದು ಅರ್ಥ;

(6) ಉದ್ಯಮಕ್ಕೆ ಸಂಬಂಧಿಸಿದಂತೆ "ದಸ್ತಾವೇಜು" ಎಂಬುದು ಉದ್ಯಮದ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ರಿಜಿಸ್ಟರುಗಳನ್ನು, ನಕಾಶೆಗಳನ್ನು, ನಕ್ಷೆಗಳನ್ನು, ಶಾಖಾ ರೇಖಾನಕ್ಷೆಗಳು, ಸಮೀಕ್ಷಾ ದಾಖಲೆಗಳನ್ನು ಮತ್ತು ಉದ್ಯಮಕ್ಕೆ ಸಂಬಂಧಿಸಿದ ಯಾವುದೇ ಸ್ವರೂಪದ ಇತರ ಎಲ್ಲಾ ದಸ್ತಾವೇಜುಗಳನ್ನು ಒಳಗೊಳ್ಳುತ್ತದೆ;

(7) "ವಿದ್ಯುಚ್ಛಕ್ತಿ ಅಧಿನಿಯಮ" ಎಂದರೆ, ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 (1910ರ ಕೇಂದ್ರ ಅಧಿನಿಯಮ 9) ಎಂದು ಅರ್ಥ;

(8) "ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ LIV) ಎಂದು ಅರ್ಥ;

(9) "ಸ್ಥಿರ ಆಸ್ತಿಗಳು", ಎಂಬುದರಲ್ಲಿ ಕಾಮಗಾರಿಗಳನ್ನು, ಬಿಡಿಭಾಗಗಳನ್ನು, ಸರಕುಗಳನ್ನು, ದಾಸ್ತಾನುಗಳನ್ನು, ಸಲಕರಣೆಗಳನ್ನು, ಉಪಕರಣಗಳನ್ನು, ಮೋಟಾರುಗಳನ್ನು ಮತ್ತು ಇತರ ವಾಹನಗಳನ್ನು, ಕಚೇರಿ ಮತ್ತು ಇತರ ಸಲಕರಣೆಗಳನ್ನು ಮತ್ತು ಪೀಠೋಪಕರಣಗಳನ್ನು ಒಳಗೊಳ್ಳುತ್ತದೆ;

(10) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ ಎಂದು ಅರ್ಥ;

(11) "ಅಮೂರ್ತ ಆಸ್ತಿಗಳು" ಎಂದರೆ ಪಗಡಿ, ಖಾತರಿದಾರರ ಕಮೀಷನ್, ಮತ್ತು ವಿದ್ಯುಚ್ಛಕ್ತಿ ಸರಬರಾಜನ್ನು ಪ್ರೋತ್ಸಾಹಿಸುವಲ್ಲಿ ಯುಕ್ತವಾಗಿ ಉದ್ಭವಿಸಿದಂತೆ, ಉದ್ಯಮದ ಬಂಡವಾಳ ಲೆಕ್ಕದಲ್ಲಿ ಖರ್ಚು ಎಂಬುದಾಗಿ ತೋರಿಸಿದಂಥ ಯಾವುದೇ ಪ್ರಾರಂಭಿಕ ಮತ್ತು ಪ್ರೋತ್ಸಾಹಕ ವೆಚ್ಚ ಎಂದು ಅರ್ಥ;

(12) "ನ್ಯಾಯ ಮಂಡಳಿ" ಎಂದರೆ, 14ನೇ ಪ್ರಕರಣದ ಅಡಿಯಲ್ಲಿ ರಚಿತವಾದ ನ್ಯಾಯ ಮಂಡಳಿ ಎಂದು ಅರ್ಥ;

(13) "ಉದ್ಯಮ" ಎಂದರೆ, ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವ್ಯವಹಾರದಲ್ಲಿ ತೊಡಗಿರುವ ಒಂದು ಉದ್ಯಮ ಎಂದು ಅರ್ಥ;

(14) "ನಿಹಿತಗೊಳಿಸುವ ದಿನಾಂಕ" ಎಂದರೆ, 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಉದ್ಯಮವು ಸರ್ಕಾರದಲ್ಲಿ ನಿಹಿತಗೊಳ್ಳುವ ದಿನಾಂಕ ಎಂದು ಅರ್ಥ;

(15) "ಕಾಮಗಾರಿ"ಗಳು ಎಂಬುದರಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾರ್ಗಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಮತ್ತು ವಿದ್ಯುಚ್ಛಕ್ತಿ ಅಧಿನಿಯಮದ ಅಡಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಮಂಜೂರು ಮಾಡಿರುವ ಲೈಸೆನ್ಸಿನ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಅಗತ್ಯವಾದ ಯಾವುದೇ ಜಮೀನುಗಳನ್ನು, ಕಟ್ಟಡಗಳನ್ನು, ಕಾರ್ಯಾಗಾರಗಳನ್ನು, ಯೋಜನೆಗಳನ್ನು, ಯಂತ್ರೋಪಕರಣಗಳನ್ನು, ಸ್ಥಾವರ ಅಥವಾ ಸಲಕರಣೆಗಳನ್ನು ಒಳಗೊಳ್ಳುತ್ತದೆ;

(16) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಆದರೆ ವಿದ್ಯುಚ್ಛಕ್ತಿ ಅಧಿನಿಯಮದಲ್ಲಿ ಅಥವಾ ಆ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಪರಿಭಾಷಿಸಿರುವಲ್ಲಿ ಆ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅಥವಾ ಆ ನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**4. ಕಂಪನಿಗಳ ಉದ್ಯಮಗಳು ಸರ್ಕಾರದಲ್ಲಿ ನಿಹಿತವಾಗುವುದು.–** (1) ನಿಯಮಿಸಿದ ದಿನಾಂಕದಂದು ಅಥವಾ ಅಂದಿನಿಂದ ಕಂಪನಿಗಳ ಉದ್ಯಮಗಳು ಈ ಅಧಿನಿಯಮದ ಕಾರಣದಿಂದಾಗಿ ರಾಜ್ಯಸರ್ಕಾರಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

(2) ನಿಹಿತಗೊಳಿಸಿದ ದಿನಾಂಕದ ತರುವಾಯ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಂಡ ಉದ್ಯಮದ ಸ್ವಾಧೀನ ಹೊಂದಿರುವ ಅಥವಾ ಅದರಿಂದ ಯಾವುದೇ ಪ್ರಯೋಜನವನ್ನು ಪಡೆಯುತ್ತಿರುವ ಪ್ರತಿಯೊಂದು ಕಂಪನಿಯು, ಅದು ಅಂಥ ಸ್ವಾಧೀನತೆ ಹೊಂದಿದ್ದ ಅಥವಾ ಅಂಥ ಪ್ರಯೋಜನವನ್ನು ಪಡೆಯುತ್ತಿದ್ದ ಅಂಥ ನಿಹಿತಗೊಳಿಸುವಿಕೆಯ ತರುವಾಯದ ಅವಧಿಗೆ ಆ ಉದ್ಯಮದ ಬಳಕೆಗಾಗಿ, ಅಧಿಭೋಗಕ್ಕಾಗಿ ಅಥವಾ ಅನುಭೋಗಕ್ಕಾಗಿ ಪರಿಹಾರವೆಂದು ಗೊತ್ತುಪಡಿಸಿದ ಪ್ರಾಧಿಕಾರಿಯು ಗೊತ್ತುಪಡಿಸಿದ ರೀತಿಯಲ್ಲಿ ಮೊಬಲಗನ್ನು ಸರ್ಕಾರಕ್ಕೆ ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು. ಅಂಥ ಪ್ರಾಧಿಕಾರವು, ಗೊತ್ತುಪಡಿಸಬಹುದಾದಂಥ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**5. ಕಂಪನಿಗಳಿಗೆ ನೀಡಬೇಕಾದ ಮೊಬಲಗು.–** (1) ಈ ಅಧಿನಿಯಮದ ಅಡಿಯಲ್ಲಿ ಯಾವ ಕಂಪನಿಯ ಉದ್ಯಮವನ್ನು ಸರ್ಕಾರದಲ್ಲಿ ನಿಹಿತಗೊಳಿಸಲಾಗಿದೆಯೋ ಆ ಕಂಪನಿಗೆ ನೀಡಬೇಕಾದ ಮೊಬಲಗನ್ನು ಇಲ್ಲಿ ಇನ್ನುಮುಂದೆ ಉಪಬಂಧಿಸಲಾದ ರೀತಿಯಲ್ಲಿ ನಿರ್ಧರಿಸತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು.

(2) ನೀಡಬೇಕಾದ ಮೊಬಲಗು ಈ ಕೆಳಗೆ ನಿರ್ದಿಷ್ಟಪಡಿಸಿದ ಮೊತ್ತದ ಒಟ್ಟು ಮೌಲ್ಯವಾಗಿರತಕ್ಕದ್ದು,–

(i) ಉದ್ಯಮಕ್ಕೆ ಸಂಬಂಧಿಸಿದಂತೆ ಪ್ರಯೋಜನಕರವಾಗಿ ಉಪಯೋಗವಾಗುತ್ತಿರುವ ಎಲ್ಲ ಪೂರ್ಣಗೊಂಡ ಮತ್ತು ಸರ್ಕಾರದ ವಶಕ್ಕೆ ನೀಡಿದ ಕಾಮಗಾರಿಗಳ (ಗ್ರಾಹಕರು ಸಂದಾಯ ಮಾಡಿದ ಕಾಮಗಾರಿಗಳನ್ನು ಹೊರತುಪಡಿಸಿ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಲೆಕ್ಕಹಾಕಿದ ಸವಕಳಿಯನ್ನು ಕಳೆದು ಉಳಿದ ಪುಸ್ತಕ ಮೌಲ್ಯ;

(ii) ಗ್ರಾಹಕರು ಅಥವಾ ಭಾವಿ ಗ್ರಾಹಕರು ಸಂದಾಯ ಮಾಡಿದ ಕಾಮಗಾರಿಗಳನ್ನು ಹೊರತುಪಡಿಸಿ, ಸರ್ಕಾರಕ್ಕೆ ಒಪ್ಪಿಸಿದ, ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳ ಪುಸ್ತಕ ಮೌಲ್ಯ;

(iii) ಸರ್ಕಾರಕ್ಕೆ ಒಪ್ಪಿಸಿದ ಬಿಡಿಭಾಗಗಳೂ ಸೇರಿದಂತೆ ಎಲ್ಲ ದಾಸ್ತಾನುಗಳ ಪುಸ್ತಕ ಮೌಲ್ಯ ಮತ್ತು ಉಪಯೋಗಿಸಿದ ದಾಸ್ತಾನುಗಳ ಮತ್ತು ಬಿಡಿಭಾಗಗಳ ಸಂದರ್ಭದಲ್ಲಿ ಸರ್ಕಾರ ಮತ್ತು ಕಂಪನಿಗಳ ನಡುವೆ ಪರಸ್ಪರ ಮಾಡಿಕೊಂಡ ಒಡಂಬಡಿಕೆಯ ಮೂಲಕ ನಿರ್ಧರಿಸಬಹುದಾದಂಥ ಮೊತ್ತ;

(iv) ನಿಹಿತವಾಗುವ ದಿನಾಂಕದಂದು ಬಳಕೆಯಲ್ಲಿರುವ ಮತ್ತು ಸರ್ಕಾರಕ್ಕೆ ಒಪ್ಪಿಸಿದ ಎಲ್ಲ ಇತರ ನಿಗದಿತ ಆಸ್ತಿಗಳ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಲೆಕ್ಕಹಾಕಲಾದ ಸವಕಳಿಯನ್ನು ಕಳೆದ ನಂತರದ ಪುಸ್ತಕದ ಮೌಲ್ಯ;

(v) ನಿಹಿತವಾಗುವ ದಿನಾಂಕದಂದು ಅಸ್ತಿತ್ವದಲ್ಲಿರುವ, ಆದರೆ ಸವೆತದ ಅಥವಾ ಬಳಕೆಯಲ್ಲಿಲ್ಲದ ಕಾರಣದಿಂದಾಗಿ ಉಪಯೋಗದಲ್ಲಿಲ್ಲದ ಎಲ್ಲ ಸ್ಥಾವರ ಮತ್ತು ಸಲಕರಣೆಯ ಮೌಲ್ಯ. ಅಂಥ ಮೌಲ್ಯವನ್ನು ಕಂಪನಿಯ ಪುಸ್ತಕಗಳಲ್ಲಿ ಲೆಕ್ಕದಿಂದ ತೆಗದುಹಾಕದಿರುವಷ್ಟರಮಟ್ಟಿಗೆ, ಪುಸ್ತಕ ಮೌಲ್ಯದಲ್ಲಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಲೆಕ್ಕಹಾಕಲಾದ ಸವಕಳಿಯನ್ನು ಕಳೆದ ನಂತರದ ಪುಸ್ತಕ ಮೌಲ್ಯ;

(vi) ಕಂಪನಿಗಳ ಪುಸ್ತಕಗಳಲ್ಲಿ ಅಂಥ ಮೌಲ್ಯವನ್ನು ಲೆಕ್ಕದಿಂದ ತೆಗೆದುಹಾಕದಿರುವಷ್ಟು ಮಟ್ಟಿಗೆ ಎಲ್ಲ ಅಮೂರ್ತ ಸ್ವತ್ತುಗಳ ಪುಸ್ತಕ ಮೌಲ್ಯ;

(vii) 6(1) (ii)ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಕಂತು ಖರೀದಿ ಒಪ್ಪಂದದ ಸಂಬಂಧದಲ್ಲಿ ಗ್ರಾಹಕರಿಂದ ಬಾಕಿಯಿರುವ ಮೊತ್ತದಲ್ಲಿ, ಕಂತುಗಳ ಒಟ್ಟು ಮೊತ್ತ ಮತ್ತು ವಸ್ತುವಿನ ಅಥವಾ ಸಲಕರಣೆಯ ಮೂಲ ಬೆಲೆ ಇವುಗಳ ನಡುವಿನ ವ್ಯತ್ಯಾಸದ ಮೊತ್ತ, ಕಂತುಗಳ ಒಟ್ಟು ಮೊತ್ತಕ್ಕೆ ಹೊಂದುವ ಬಾಕಿ ಇರುವ ಅದೇ ಪ್ರಮಾಣದ ಮೊತ್ತವನ್ನು ಕಳೆದು ಉಳಿದ ಮೊತ್ತ;

(viii) 6(1) (iii)ನೇ ಪ್ರಕರಣದಲ್ಲಿ ಉಲೇಖಿಸಿರುವ ಪ್ರತಿಯೊಂದು ಕರಾರಿನ ಸಂಬಂಧದಲ್ಲಿ ಕಂಪನಿಯು ವಾಸ್ತವವಾಗಿ ಸಂದಾಯ ಮಾಡಿದ ಯಾವುದೇ ಮೊತ್ತ;

[1][(ix) ಕಡ್ಡಾಯ ಸ್ವರೂಪದ ಸ್ವಾಧೀನತೆಯನ್ನು ಪರಿಗಣಿಸಿ (i) ರಿಂದ (vi)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗುಗಳ ಒಟ್ಟು ಮೊತ್ತದ ಶೇ. ಹತ್ತರಷ್ಟಕ್ಕೆ ಸಮನಾದ ಮೊತ್ತ;][1]

1 1981ರ ಅಧಿನಿಯಮ 14ರ ಮೂಲಕ 07.04.1981ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**ವಿವರಣೆ.–** (ಎ) ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ ಯಾವುದೇ ಸ್ಥಿರ ಸ್ವತ್ತಿನ ಪುಸ್ತಕ ಮೌಲ್ಯ ಎಂದರೆ, ಅದರ ಮೂಲ ಬೆಲೆ ಎಂದು ಅರ್ಥ ಮತ್ತು ಅದು,–

(i) ತಲುಪಿಸುವ ವೆಚ್ಚ ಮತ್ತು ಉದ್ಯಮದ ಪುಸ್ತಕಗಳಲ್ಲಿ ತೋರಿಸಲಾದಂತೆ, ಆಸ್ತಿಯ ನಿರ್ಮಾಣ ಮತ್ತು ಅದನ್ನು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವಂತೆ ಮಾಡಲು ಯಥೋಚಿತವಾಗಿ ಮಾಡಿದ ಎಲ್ಲ ವೆಚ್ಚಗಳೂ ಸೇರಿದಂತೆ ಆಸ್ತಿಗೆ ಕಂಪನಿಯು ಸಂದಾಯ ಮಾಡಿದ ಖರೀದಿ ಬೆಲೆ;

(ii) ಸಾಲ ತೆಗೆದುಕೊಂಡ ಹಣದಿಂದ ಮಾಡಿದ ಮತ್ತು ಆಸ್ತಿಯನ್ನು ಪ್ರಯೋಜನಕಾರಿಯಾಗಿ ಬಳಕೆಗೆ ತಂದ ದಿನಾಂಕದವರೆಗೆ ಅದಕ್ಕೆ ಯುಕ್ತವಾಗಿ ಸಂಬಂಧಿಸಿದೆ ಎಂದು ಉದ್ಯಮದ ಪುಸ್ತಕಗಳಲ್ಲಿ ತೋರಿಸಲಾದ, ವರ್ಷಕ್ಕೆ ಶೇಕಡಾ ಆರರಷ್ಟಕ್ಕೆ ಮೀರದ ದರದಲ್ಲಿ ಬಂಡವಾಳ ವೆಚ್ಚದ ಮೇಲಿನ ಬಡ್ಡಿ ಹಣ;

(iii) ವಾಸ್ತವವಾಗಿ ಮಾಡಿದ ಆದರೆ ಪ್ಯಾರಾ (i)ರಲ್ಲಿ ಉಲ್ಲೇಖಿಸಿದ ಮೊತ್ತದ ಶೇಕಡಾ ಹದಿನೈದರಷ್ಟನ್ನು ಮೀರದ ಮೇಲ್ವಿಚಾರಣಾ ವೆಚ್ಚ;

(ಬಿ) ಇತ್ತೀಚಿನ ವಾರ್ಷಿಕ ಲೆಕ್ಕಪತ್ರಕ್ಕೆ ಸಂಬಂಧಿಸಿದ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದರೆ ಅಥವಾ ವಿದ್ಯುಚ್ಛಕ್ತಿ ಅಧಿನಿಯಮದ ಅಡಿಯಲ್ಲಿ ಯಾವುದೇ ವಾರ್ಷಿಕ ಲೆಕ್ಕಪತ್ರವನ್ನು ಸಲ್ಲಿಸಬೇಕಾಗಿಲ್ಲದಿರುವಲ್ಲಿ, ಆಸ್ತಿಯ ಪುಸ್ತಕ ಮೌಲ್ಯವು, ಕಂಪನಿಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ತರುವಾಯ ಸರ್ಕಾರವು ನಿರ್ಧರಿಸಬಹುದಾದಂಥ ಮೊತ್ತವಾಗಿರತಕ್ಕದ್ದು.

(3) (2)ನೇ ಉಪ–ಪ್ರಕರಣದ ಅನುಸಾರವಾಗಿ ನೀಡಬೇಕಾದ ಮೊಬಲಗಿನಲ್ಲಿ ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ಅದರಿಂದ ಕಳೆಯಬೇಕಾದ ಮೊಬಲಗನ್ನು ಕಳೆದ ನಂತರ ಉಳಿಯುವುದು ಬಾಕಿ ಮೊಬಲಗು ಆಗತಕ್ಕದ್ದು ಮತ್ತು ನಿಹಿತಗೊಳ್ಳುವ ದಿನಾಂಕದಿಂದ ಆ ಹಣಕ್ಕೆ ವರ್ಷಕ್ಕೆ ಶೇಕಡಾ ಐದರ ದರದಲ್ಲಿ ಬಡ್ಡಿ ದೊರೆಯತಕ್ಕದ್ದು.

(4) ಬಾಕಿ ಇರುವ ಮೊಬಲಗನ್ನು, ಈ ಸಂಬಂಧದಲ್ಲಿ ರಚಿಸಿದ ನಿಯಮಗಳಿಗೊಳಪಟ್ಟು, ಪೂರ್ಣವಾಗಿ ಅಥವಾ ಐದಕ್ಕಿಂತ ಹೆಚ್ಚಾಗದ ಕಂತುಗಳಲ್ಲಿ ಅಥವಾ (3)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿ ದೊರೆಯುವ ವರ್ಗಾಯಿಸಬಹುದಾದ ಅಥವಾ ವರ್ಗಾಯಿಸಲಾಗದ ಬಾಂಡುಗಳ ರೂಪದಲ್ಲಿ ಮತ್ತು ಹತ್ತು ವರ್ಷಗಳನ್ನು ಮೀರದ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ವಾಯಿದೆ ತುಂಬಿರುವ ಖಾತರಿ ಮುಖಬೆಲೆ ರೂಪದಲ್ಲಿ ಸಂದಾಯ ಮಾಡಬಹುದು.

**6. ನಿಹಿತಗೊಳ್ಳುವುದರ ಸಾಮಾನ್ಯ ಪರಿಣಾಮ.–** (1) 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳ್ಳುವ ಕಂಪನಿಗಳ ಉದ್ಯಮಗಳು ಈ ಕೆಳಗೆ ನಿರ್ದಿಷ್ಟಪಡಿಸಿದ ಆಸ್ತಿಯನ್ನು, ಹಕ್ಕುಗಳನ್ನು, ಹೊಣೆಗಳನ್ನು ಮತ್ತು ಬಾಧ್ಯತೆಗಳನ್ನು ಮಾತ್ರ ಒಳಗೊಂಡಿರುವುದಾಗಿ ಭಾವಿಸತಕ್ಕದ್ದು:–

(i) ಕಂಪನಿಗಳ ಎಲ್ಲ ಸ್ಥಿರಾಸ್ತಿಗಳಿಗೆ ಮತ್ತು ಉದ್ಯಮಗಳಿಗೆ ಸಂಬಂಧಿಸಿದ ಎಲ್ಲ ದಸ್ತಾವೇಜುಗಳು;

(ii) ನಿಹಿತಗೊಳ್ಳುವ ದಿನಾಂಕಕ್ಕೆ ಮೊದಲು, ಸಾಮಗ್ರಿಗಳ ಅಥವಾ ಸಾಧನಗಳ ಸರಬರಾಜಿಗೆ ಸದ್ಭಾವನೆಯಿಂದ ಮಾಡಿಕೊಂಡ ಕಂತು ಖರೀದಿ ಒಪ್ಪಂದಗಳೇನಾದರೂ ಇದ್ದರೆ ಅವುಗಳಡಿಯಲ್ಲಿ ಕಂಪನಿಗಳ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು;

(iii) ನಿಹಿತಗೊಳ್ಳುವ ದಿನಾಂಕಕ್ಕೆ ಮೊದಲು ಹಣವನ್ನು ಸಾಲ ತೆಗೆದುಕೊಳ್ಳುವುದಕ್ಕೆ ಅಥವಾ ಸಾಲ ನೀಡುವುದಕ್ಕೆ ಸಂಬಂಧಿಸಿದ ಕರಾರು ಆಗಿರದ, ಸದ್ಭಾವನೆಯಿಂದ ಮಾಡಿಕೊಂಡ ಯಾವುದೇ ಇತರ ಕರಾರಿನ ಅಡಿಯಲ್ಲಿ ಬರುವ ಕಂಪನಿಗಳ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು;

(2) (1)ನೇ ಉಪ–ಪ್ರಕರಣದ (1)ನೇ ಬಾಬಿನಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಆಸ್ತಿಗಳು, ಕಂಪನಿಗಳ ಯಾವುದೇ ಋಣಗಳಿಂದ, ಅಡಮಾನಗಳಿಂದ ಅಥವಾ ಉದ್ಯಮಗಳಿಗೆ ಸೇರಿಸುವುದಕ್ಕಾಗಿ ಇರುವ ಅಂಥದೇ ಬಾಧ್ಯತೆಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು:

ಪರಂತು, ಅಂಥ ಋಣಗಳನ್ನು, ಅಡಮಾನಗಳನ್ನು ಅಥವಾ ಬಾಧ್ಯತೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ಆಸ್ತಿಗಳಿಗೆ ನೀಡಲಾಗುವ ಮೊತ್ತಕ್ಕೆ ಸೇರಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಂಡ ಉದ್ಯಮಗಳ ಸಂದರ್ಭದಲ್ಲಿ, ವಿದ್ಯುತ್ ಸರಬರಾಜಿಗಾಗಿ ಮಂಜೂರು ಮಾಡಿದ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸಲಾದ ಲೈಸೆನ್ಸನ್ನು ನಿಹಿತಗೊಂಡ ದಿನಾಂಕದಂದು ಕೊನೆಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಆ ದಿನಾಂಕಕ್ಕೆ ಮೊದಲು ವಿದ್ಯುತ್ ಸರಬರಾಜು ಮಾಡಲು ಯಾವುದೇ ಕರಾರನ್ನು ಮಾಡಿಕೊಂಡಿದ್ದರೆ ಅದರ ಅಡಿಯಲ್ಲಿ ಕಂಪನಿಗಳ ಎಲ್ಲ ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳು ಸರ್ಕಾರಕ್ಕೆ ಸೇರತಕ್ಕದ್ದು:

ಪರಂತು, ಅಂಥ ಯಾವುದೇ ಕರಾರು, ಸರ್ಕಾರವು ಅನುಮೋದಿಸಿದ ಮತ್ತು ನಿಹಿತಗೊಂಡ ದಿನಾಂಕದಂದು ಜಾರಿಯಲ್ಲಿದ್ದ ವಿದ್ಯುಚ್ಛಕ್ತಿ ಸರಬರಾಜಿನ ದರಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿರದಿದ್ದರೆ, ಆ ಕರಾರು ಸರ್ಕಾರದ ಆಯ್ಕೆಯಂತೆ ಅನೂರ್ಜಿತವಾಗತಕ್ಕದ್ದು.

(4) ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಂಡ ಆಸ್ತಿಯನ್ನು, ಹಕ್ಕುಗಳನ್ನು,

ಹೊಣೆಗಾರಿಕೆಗಳನ್ನು ಮತ್ತು ಬಾಧ್ಯತೆಗಳನ್ನು ಮಂಡಳಿಗೆ ವರ್ಗಾವಣೆ ಮಾಡಲು ಮತ್ತು ಮಂಡಳಿಯಲ್ಲಿ ನಿಹಿತಗೊಳಿಸಲು ಉಪಬಂಧ ಕಲ್ಪಿಸಬಹುದು ಮತ್ತು ಆ ತರುವಾಯ, ಅಂಥ ಆಸ್ತಿ, ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳು ಮಂಡಳಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕದ್ದು.

**7. ಮೊಬಲಗಿನಿಂದ ಮಾಡುವ ಕಡಿತಗಳು.–** ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಕಂಪನಿಗೆ ನೀಡಬೇಕಾದ ಮೊಬಲಗಿನಿಂದ ಈ ಮುಂದಿನ ಮೊತ್ತಗಳನ್ನು ಕಡಿತ ಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದು:–

(ಎ) 5ನೇ ಪ್ರಕರಣದ ಅಡಿಯಲ್ಲಿ ನೀಡಬೇಕಾದ ಯಾವುದೇ ಮೊಬಲಗಿನ ರೂಪದಲ್ಲಿ ಈಗಾಗಲೇ ಮುಂಗಡವಾಗಿ ನೀಡಲಾಗಿರುವ ಮೊತ್ತ ಯಾವುದಾದರೂ ಇದ್ದರೆ, ಆ ಮೊತ್ತ;

(ಬಿ) 4ನೇ ಪ್ರಕರಣದ (2)ನೇ ಉಪ–ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮೊತ್ತ ಯಾವುದಾದರೂ ಇದ್ದರೆ, ಆ ಮೊತ್ತ;

(ಸಿ) 9 ಅಥವಾ 11ನೇ ಪ್ರಕರಣದ ಅಡಿಯಲ್ಲಿ ಕಡಿತಗೊಳಿಸಬಹುದಾದ ಅಥವಾ ಕಡಿತಗೊಳಿಸಬೇಕೆಂದು ಆದೇಶಿಸುವ ಮೊತ್ತ ಯಾವುದಾದರೂ ಇದ್ದರೆ ಆ ಮೊತ್ತ;

(ಡಿ) ನಿಹಿತಗೊಂಡ ದಿನಾಂಕದ ನಿಕಟಪೂರ್ವದ ಒಂದು ತಿಂಗಳಿಗೂ ಮುಂಚಿನ ಯಾವುದೇ ಅವಧಿಗಾಗಿ ಸರಬರಾಜು ಮಾಡಿದ ವಿದ್ಯುಚ್ಛಕ್ತಿಗಾಗಿ ಸರ್ಕಾರಕ್ಕೆ ಅಥವಾ ಮಂಡಳಿಗೆ ಕಂಪನಿಯಿಂದ ಯಾವುದಾದರೂ ಮೊತ್ತ ಬಾಕಿ ಇದ್ದರೆ ಆ ಮೊತ್ತ;

(ಇ) ಸಾಲಗಳ ಮತ್ತು ಅದರ ಮೇಲಿನ ಬಡ್ಡಿಯ ಬಾಕಿಗಳು ಯಾವುವಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ, ಕಂಪನಿಯಿಂದ ಸರ್ಕಾರಕ್ಕೆ ಅಥವಾ ಮಂಡಳಿಗೆ ಬಾಕಿ ಇರುವ ಎಲ್ಲ ಇತರ ಮೊತ್ತ ಮತ್ತು ಅದರ ಮೇಲಿನ ಬಡ್ಡಿ ಯಾವುದಾದರೂ ಇದ್ದರೆ ಅದು:

ಪರಂತು, ನಿಹಿತಗೊಂಡ ದಿನಾಂಕದ ನಿಕಟ ಒಂದು ತಿಂಗಳಿಗೆ ಮೊದಲಿನ ಯಾವುದೇ ಅವಧಿಯಲ್ಲಿ ಬಾಕಿಯಾದ ಮತ್ತು ಆ ದಿನಾಂಕದಂದು ಬಾಕಿ ಉಳಿದಿರುವ ಸಾಲದ ಕಂತುಗಳು ಮತ್ತು ಅದರ ಮೇಲಿನ ಬಡ್ಡಿಯ ಬಾಕಿಗಳನ್ನು ಕಡಿತ ಮಾಡತಕ್ಕದ್ದು;

(ಎಫ್) ಸರ್ಕಾರದ ಸ್ವಾಧೀನಕ್ಕೆ ಒಪ್ಪಿಸದಿರುವ ಉದ್ಯಮಕ್ಕೆ ಸೇರಿದ ಯಾವುದೇ ಸ್ವತ್ತು ಅಥವಾ ಹಕ್ಕುಗಳ ಕಾರಣದಿಂದಾಗಿ ಸರ್ಕಾರಕ್ಕೆ ಉಂಟಾಗಿರುವ ನಷ್ಟಕ್ಕೆ ಸಮನಾದ ಮೊತ್ತ ಯಾವುದಾದರೂ ಇದ್ದರೆ ಆ ಮೊತ್ತ, ಮೇಲೆ ಹೇಳಿದಂತೆ ಪ್ರಾಪ್ತವಾಗಬಹುದಾದಂಥ ಆದಾಯದ ಜೊತೆಗೆ, ಯಾವ ಅಂಥ ನಷ್ಟದ ಮೊತ್ತವನ್ನು ಮೊತ್ತವೆಂದು ಭಾವಿಸಲಾಗುತ್ತಿದೆಯೋ ಆ ನಷ್ಟದ ಮೊತ್ತದ ಮೂಲಕ ಅಂಥ ಸ್ವತ್ತು ಅಥವಾ ಹಕ್ಕುಗಳ ಮಾರುಕಟ್ಟೆ ಮೌಲ್ಯವು ಈ ಅಧಿನಿಯಮದ ಅಡಿಯಲ್ಲಿ ಆ ಬಗ್ಗೆ ಸಂದಾಯ ಮಾಡಬಹುದಾದ ಮೊಬಲಗನ್ನು ಮೀರುವುದೋ ಆ ನಷ್ಟದ ಮೊತ್ತ;

(ಜಿ) ಕಂಪನಿಯು ಸರ್ಕಾರಕ್ಕೆ ಸಂದಾಯ ಮಾಡದಿರುವಷ್ಟರ ಮಟ್ಟಿಗೆ ನಿಹಿತಗೊಂಡ ದಿನಾಂಕದಂದು ಭದ್ರತಾ ಠೇವಣಿಗಳ ಮತ್ತು ಅದರ ಮೇಲೆ ಬರಬೇಕಾಗಿರುವ ಬಡ್ಡಿಯ ಬಾಕಿಗಳ ಮೂಲಕ ಗ್ರಾಹಕರು ಸಂದಾಯ ಮಾಡಿದ ಎಲ್ಲ ಮೊತ್ತಗಳಲ್ಲಿ ಆ ದಿನಾಂಕಕ್ಕೆ ಮುಂಚೆ ಅದು ಸರಬರಾಜು ಮಾಡಿದ ವಿದ್ಯುಚ್ಛಕ್ತಿಗಾಗಿ ಪುಸ್ತಕಗಳ ಪ್ರಕಾರ ಗ್ರಾಹಕರಿಂದ ಕಂಪನಿಗೆ ಬಾಕಿಯಾಗಿರುವಂಥ ಮೊತ್ತಗಳನ್ನು ಕಳೆದು ಉಳಿದ ಮೊತ್ತ;

(ಎಚ್) ಗ್ರಾಹಕರಿಂದ ಮತ್ತು ಭಾವೀ ಗ್ರಾಹಕರಿಂದ ಬರುವ ಎಲ್ಲ ಮುಂಗಡಗಳು ಮತ್ತು ಅಂಥ ಮುಂಗಡಗಳು ಅಥವಾ ಮೊತ್ತಗಳನ್ನು ಕಂಪನಿಯು ಸರ್ಕಾರಕ್ಕೆ ಸಂದಾಯ ಮಾಡದಿರುವಷ್ಟರ ಮಟ್ಟಿಗೆ ಗ್ರಾಹಕರ ನಿಧಿಗೆ ಜಮೆಗೊಳಿಸಲು ತೆಗೆದಿರಿಸಲಾದ ಅಥವಾ ತೆಗೆದಿರಿಸಬೇಕಾದ ಎಲ್ಲ ಮೊತ್ತಗಳು;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಹದಿನಾರನೇ ಅನುಸೂಚಿಯು ಜಾರಿಗೆಬರುವ ದಿನಾಂಕಕ್ಕೆ ಮುಂಚೆ ಯಾವುದೇ ಲೆಕ್ಕದ ವರ್ಷಕ್ಕಾಗಿ "ಗ್ರಾಹಕರ ನಿಧಿ" ಎಂದರೆ, ಸಗಟು ಸರಬರಾಜು ಒಪ್ಪಂದದಲ್ಲಿ ಉಲ್ಲೇಖಿಸಿದ ಮೊಬಲಗು ಮತ್ತು ಸದರಿ ದಿನಾಂಕದಂದು ಮತ್ತು ಅಂದಿನಿಂದ ಯಾವುದೇ ಲೆಕ್ಕದ ವರ್ಷಕ್ಕಾಗಿ ಎಂದರೆ, ಸದರಿ ಅನುಸೂಚಿಯ II(1)ನೇ ಪ್ಯಾರಾದಲ್ಲಿ ಗ್ರಾಹಕರಿಗೆ ವಿತರಿಸಲು ತೆಗೆದಿರಿಸಿರುವ ಮೊಬಲಗು ಎಂದರ್ಥ;

(ಐ) ಯಾವುದೇ ಕಾನೂನು, ಐತೀರ್ಪು, ಒಪ್ಪಂದ, ಸೇವಾ ಕರಾರಿನ ಅಡಿಯಲ್ಲಿ ಅಥವಾ ಅನ್ಯಥಾ ಉದ್ಯಮದ ಸಂಬಂಧದಲ್ಲಿ ಸರ್ಕಾರಕ್ಕೆ ವರ್ಗವಾದ ಅಂಥ ಸದಸ್ಯನು ಸಲ್ಲಿಸಿದ ನಿರ್ದಿಷ್ಟ ಸೇವಾ ಅವಧಿಯ ತರುವಾಯ ಸಿಬ್ಬಂದಿಯ ಸದಸ್ಯನಿಗೆ, ಸಂಬಳ, ಮಜೂರಿ, ರಜಾ ಸಂಬಳ, ಬೋನಸ್, ನಿವೃತ್ತಿ ವೇತನ, ಉಪದಾನ, ಭವಿಷ್ಯ ನಿಧಿ, ಭದ್ರತಾ ಠೇವಣಿಯನ್ನು ಅಥವಾ ಇತರ ಸಂದಾಯವನ್ನು ಪಾವತಿ ಮಾಡಬೇಕಾಗಿ ಬಂದಾಗ,–

(ಎ) ಅಂಥ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ನಿಹಿತಗೊಂಡ ದಿನಾಂಕದವರೆಗಿನ ಅವಧಿಯ ಅದೇ ಪ್ರಮಾಣವು ಮೇಲೆ ಹೇಳಿದ ಇಡೀ ನಿರ್ದಿಷ್ಟ ಅವಧಿಗೆ ಅನ್ವಯವಾಗುವಂತೆ ಸದರಿ ನಿರ್ದಿಷ್ಟ ಅವಧಿಯ ಮುಕ್ತಾಯದ ತರುವಾಯ ಸಂದಾಯ ಮಾಡಬೇಕಾದ ಪೂರ್ಣ ಸಂಬಳ, ಮಜೂರಿ, ರಜಾ ಸಂಬಳ, ಬೋನಸ್, ನಿವೃತ್ತಿ ವೇತನ, ಉಪದಾನ, ಭವಿಷ್ಯ ನಿಧಿ, ಭದ್ರತಾ ಠೇವಣಿ ಅಥವಾ ಇತರ ಸಂದಾಯಕ್ಕೆ ಸಂಬಂಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು;

(ಬಿ) ಅಂಥ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ತರುವಾಯ, ಅಂಥ ಪೂರ್ಣ ಸಂಬಳ, ಮಜೂರಿ, ರಜಾ ಸಂಬಳ, ಬೋನಸ್, ನಿವೃತ್ತಿ ವೇತನ, ಉಪದಾನ, ಭವಿಷ್ಯನಿಧಿ, ಭದ್ರತಾ ಠೇವಣಿ ಅಥವಾ ಇತರ ಸಂದಾಯಕ್ಕೆ ಸಮನಾದ ಮೊತ್ತವನ್ನು:

ಪರಂತು, ಈ ಖಂಡದಲ್ಲಿ ಉಲ್ಲೇಖಿಸಿರುವಂತೆ ಸಂಬಳ, ಮಜೂರಿ, ರಜಾ ಸಂಬಳ, ಬೋನಸ್, ನಿವೃತ್ತಿ ವೇತನ, ಉಪದಾನ, ಭವಿಷ್ಯನಿಧಿ, ಭದ್ರತಾ ಠೇವಣಿ ಅಥವಾ ಇತರ ಸಂದಾಯಕ್ಕಾಗಿ ಯಾವುದೇ ಮೀಸಲು ನಿಧಿಯನ್ನು ಸ್ಥಾಪಿಸಲಾಗಿದ್ದರೆ, ಮತ್ತು ಅಂಥ ಮೀಸಲು ನಿಧಿಯನ್ನು ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳಿಸಲಾಗಿದ್ದರೆ, ಹಾಗೆ ನಿಹಿತಗೊಳಿಸಲಾದಂಥ ಮೀಸಲು ನಿಧಿಯ ಮೊಬಲಗನ್ನು ಈ ಖಂಡದ ಅಡಿಯಲ್ಲಿ ಕಡಿತಗೊಳಿಸತಕ್ಕದ್ದಲ್ಲ;

(ಜೆ) ವಸೂಲಾಗದ ಮತ್ತು ವಸೂಲಾತಿ ಸಂದೇಹಾಸ್ಪದವಾದ ಸಾಲಗಳಿಗಾಗಿ ಅಥವಾ ಇತರ ಯಾವುದೇ ಮೀಸಲು ನಿಧಿಗಾಗಿ ಅಭಿವೃದ್ಧಿ ರಿಯಾಯಿತಿ ಮೀಸಲು, ಸಾದಿಲ್ವಾರುಗಳು, ಮೀಸಲುಗಳು, ಸುಂಕ ಮತ್ತು ಲಾಭಾಂಶದ ನಿಯಂತ್ರಣ ಮೀಸಲು, ಗ್ರಾಹಕರ ರಿಯಾಯಿತಿ ಮೀಸಲುಗಳ ಲೆಕ್ಕದಲ್ಲಿ ಯಾವುದಾದರೂ ಮೊತ್ತಗಳು ಜಮೆಯಿದ್ದರೆ, ಆ ಮೊತ್ತಗಳು.

[1][7ಎ. **ನ್ಯಾಯ ಮಂಡಳಿಗೆ ಅರ್ಜಿ.–** ಯಾವನೇ ವ್ಯಕ್ತಿಯು,–

(i) 5ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಬಹುದಾದ ಮತ್ತು ಸಂದಾಯ ಮಾಡಬಹುದಾದ ಮೊಬಲಗಿನ ಬಗ್ಗೆ; ಅಥವಾ

(ii) ಕಂಪನಿಗಳ ಯಾವ ಆಸ್ತಿ, ಹಕ್ಕು, ಹೊಣೆ ಮತ್ತು ಬಾಧ್ಯತೆಗಳನ್ನು 6ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳ್ಳಬೇಕೆಂಬುದರ ಬಗ್ಗೆ; ಅಥವಾ

(iii) 7ನೇ ಪ್ರಕರಣದ ಅಡಿಯಲ್ಲಿ ಕಡಿತಗೊಳಿಸಬೇಕಾದ ಮೊಬಲಗಿನ ಬಗ್ಗೆ ಯಾವುದೇ ವ್ಯಕ್ತಿ ವಿವಾದಿಸಿದರೆ ಅವನು

– ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನತೆ) (ತಿದ್ದುಪಡಿ) ಅಧಿನಿಯಮ, 1995 ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಬಹುದು:

ಪರಂತು, ಅರ್ಜಿ ಸಲ್ಲಿಸಿರುವ ವ್ಯಕ್ತಿಗೆ ಆ ಅವಧಿಯೊಳಗೆ ಅರ್ಜಿ ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದವು ಎಂಬುದು ನ್ಯಾಯಮಂಡಳಿಗೆ ಮನದಟ್ಟಾದರೆ, ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ತರುವಾಯವೂ ಅಂಥ ಅರ್ಜಿಯನ್ನು ಪರಿಗಣಿಸಬಹುದು.][1]

1. 1995ರ ಅಧಿನಿಯಮ 9ರ ಮೂಲಕ 18.12.1974ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**8. ಸ್ವಾಧೀನಪಡಿಸಿಕೊಂಡ ಸ್ವತ್ತಿನ ಮತ್ತು ಅದಕ್ಕೆ ಸಂಬಂಧಿಸಿದ ದಸ್ತಾವೇಜುಗಳ ಸ್ವಾಧೀನತೆಯನ್ನು ವಹಿಸಿಕೊಡುವ ಕರ್ತವ್ಯ.–** (1) 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾದ ಸ್ವತ್ತಿನ ಸಂಬಂಧದಲ್ಲಿ, ಯಾರ ಸ್ವಾಧೀನದಲ್ಲಿ ಅಥವಾ ರಕ್ಷಣೆಯಲ್ಲಿ ಅಥವಾ ಯಾರ ನಿಯಂತ್ರಣದಲ್ಲಿ ಆ ಸ್ವತ್ತು ಇದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಆ ಉದ್ದೇಶಕ್ಕಾಗಿ ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ ಸ್ವತ್ತನ್ನು ಕೂಡಲೇ ವಹಿಸಿಕೊಡತಕ್ಕದ್ದು ಮತ್ತು ಅದನ್ನು ವಹಿಸುವವರೆಗೆ ಅಂಥ ವ್ಯಕ್ತಿಯು, ನಿಹಿತಗೊಂಡ ದಿನಾಂಕದಿಂದ ಸರ್ಕಾರದ ಪರವಾಗಿ ಆ ಸ್ವತ್ತಿನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿದ್ದನೆಂದು ಭಾವಿಸತಕ್ಕದ್ದು.

(2) ನಿಹಿತಗೊಳಿಸುವ ದಿನಾಂಕದಂದು, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳಿಸಿದ ಯಾವುದೇ ದಸ್ತಾವೇಜನ್ನು ತನ್ನ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಯಾವನೇ ವ್ಯಕ್ತಿಯು, ಅಂಥ ದಸ್ತಾವೇಜಿನ ಸಂಬಂಧ ಸರ್ಕಾರಕ್ಕೆ ಜವಾಬ್ದಾರನಾಗಿರತಕ್ಕದ್ದು ಮತ್ತು ಅದನ್ನು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ ವಹಿಸಿಕೊಡತಕ್ಕದ್ದು.

(3) ಈ ಪ್ರಕರಣದಲ್ಲಿ ಒಳಗೊಂಡಿರುವ ಇತರ ಉಪಬಂಧಗಳಿಗೆ ಬಾಧಕವಾಗದಂತೆ, 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳಿಸಲಾದ ಎಲ್ಲ ಸ್ವತ್ತುಗಳ ಮತ್ತು ದಸ್ತಾವೇಜಿನ ಸ್ವಾಧೀನತೆಯನ್ನು ಪಡೆಯಲು ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲು ಅಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ ಕಾನೂನು ಪ್ರಕಾರ ಅಧಿಕಾರವಿರತಕ್ಕದ್ದು.

**9. ವಿವರಗಳನ್ನು ಒದಗಿಸುವುದು ಕಂಪನಿಯ ಕರ್ತವ್ಯ.–** (1) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಳಿಸಲಾದ ಒಂದು ಕಂಪನಿಯ ಉದ್ಯಮದ ಸಂಬಂಧದಲ್ಲಿ, ಕಂಪನಿಯು, ನಿಹಿತಗೊಳಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಅಥವಾ ಸರ್ಕಾರವು ಈ ಸಂಬಂಧದಲ್ಲಿ ಅನುಮತಿಸಬಹುದಾದಂಥ ಮತ್ತಷ್ಟು ಅವಧಿಯೊಳಗೆ ಸರ್ಕಾರಕ್ಕೆ ಈ ಮುಂದಿನವುಗಳನ್ನು ಒದಗಿಸತಕ್ಕದ್ದು,–

(ಎ) ನಿಹಿತಗೊಳಿಸಿದ ದಿನಾಂಕದ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಪುಸ್ತಕ ಋಣಗಳು ಮತ್ತು ಕಂಪನಿಗೆ ಸೇರಿದ ಹೂಡಿಕೆಗಳು ಮತ್ತು ಎಲ್ಲ ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳ ವಿವರಗಳು; ಮತ್ತು

(ಬಿ) ಈ ಅಧಿನಿಯಮದ ಬಲದಿಂದ ಸರ್ಕಾರವು ಹೊಂದಿರುವ ಅಥವಾ ಹೊಂದುವ ಅಥವಾ ಹೊಂದಬಹುದಾದ ಹೊಣೆಗಾರಿಕೆಗಳ ಅಥವಾ ಬಾಧ್ಯತೆಗಳ ಮೇರೆಗೆ ಕಂಪನಿಯ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ರಜೆ, ನಿವೃತ್ತಿವೇತನ, ಉಪದಾನ ಮತ್ತು ಇತರ ಸೇವಾ ನಿಬಂಧನೆಗಳಿಗೆ ಸಂಬಂಧಿಸಿದ, ವ್ಯಕ್ತವಾಗಿರುವ ಅಥವಾ ಸೂಚ್ಯವಾಗಿರುವ ಯಾವುವೇ ಒಪ್ಪಂದಗಳು ಸೇರಿದಂತೆ, ಕಂಪನಿಯು ಮಾಡಿಕೊಂಡ ಮತ್ತು ನಿಹಿತಗೊಂಡ ದಿನಾಂಕದಂದು ಜಾರಿಯಲ್ಲಿದ್ದ ಎಲ್ಲ ಒಪ್ಪಂದದ ವಿವರಗಳನ್ನು ಮತ್ತು ಈ ಉದ್ದೇಶಕ್ಕಾಗಿ ಸರ್ಕಾರವು ಕಂಪನಿಗೆ ಎಲ್ಲ ಸೂಕ್ತ ಸೌಕರ್ಯಗಳನ್ನು ಒದಗಿಸತಕ್ಕದ್ದು.

(2) (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ, ಪುಸ್ತಕ ಋಣಗಳನ್ನು, ಹೊಣೆಗಳನ್ನು ಮತ್ತು ಒಪ್ಪಂದದ ವಿವರಗಳನ್ನು ತನಗೆ ಅನುಮತಿಸಿದ ಸಮಯದೊಳಗೆ ಸರ್ಕಾರಕ್ಕೆ ಒದಗಿಸಲು ಕಂಪನಿಯು ವಿಫಲವಾದರೆ, ಈ ಅಧಿನಿಯಮದಲ್ಲಿರುವ ಯಾವುದೂ, ಅಂಥ ಯಾವುವೇ ಪುಸ್ತಕ ಋಣಗಳು, ಹೊಣೆಗಳನ್ನು ಮತ್ತು ಒಪ್ಪಂದಗಳನ್ನು ವರ್ಗಾಯಿಸಲಾಗಿದೆ ಎಂಬಂತೆ ಅಥವಾ ಅವುಗಳನ್ನು ಸರ್ಕಾರದಲ್ಲಿ ನಿಹಿತಗೊಳಿಸಲಾಗಿದೆ ಎಂಬಂತೆ ಪರಿಣಮಿಸತಕ್ಕದ್ದಲ್ಲ:

ಪರಂತು, ಅಂಥ ಒಪ್ಪಂದದ ಯಾರೇ ಪಕ್ಷಕಾರನು ನಿಹಿತಗೊಂಡ ದಿನಾಂಕದಿಂದ ಎರಡು ತಿಂಗಳೊಳಗಾಗಿ ಒಪ್ಪಂದದ ವಿವರಗಳನ್ನು ಸರ್ಕಾರಕ್ಕೆ ಒದಗಿಸಿದ್ದರೆ ಮತ್ತು ಅಂಥ ವಿವರಗಳನ್ನು ಸಲ್ಲಿಸಿದ ತರುವಾಯ ಆರು ತಿಂಗಳ ಅವಧಿಯ ಒಳಗೆ ಸರ್ಕಾರವು ಒಪ್ಪಂದದ ಮೇರೆಗೆ ಹೊಣೆಗಳನ್ನು ಅಂಗೀಕರಿಸಿದ್ದರೆ, ಈ ಉಪ-ಪ್ರಕರಣದಲ್ಲಿರುವ ಯಾವುದೂ, ಯಾವುದೇ ಒಪ್ಪಂದಕ್ಕೆ ಅನ್ವಯವಾಗತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದ ವಿವರಗಳನ್ನು ಸಲ್ಲಿಸಿದ ತರುವಾಯ, ಸರ್ಕಾರವು, ಆರು ತಿಂಗಳ ಅವಧಿಯ ಒಳಗಾಗಿ ನೀಡಬಹುದಾದ ಲಿಖಿತ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಅಂತಹ ಪುಸ್ತಕ ಋಣಗಳನ್ನು ಮತ್ತು ಹೂಡಿಕೆಗಳನ್ನು ಸರ್ಕಾರದಲ್ಲಿ ನಿಹಿತಗೊಳಿಸುತ್ತಿರುವ ಸ್ವತ್ತಿನಲ್ಲಿ ಸೇರಿಸಿಲ್ಲವೆಂದು, ಅದರಿಂದಾಗಿ, 5ನೇ ಪ್ರಕರಣದ ಮೂಲಕ ಉಪಬಂಧಿಸಿದ ಮೊಬಲಗನ್ನು ಅಂಥ ಹೊರತುಪಡಿಸಲಾದ ಪುಸ್ತಕ ಋಣಗಳ ಮತ್ತು ಹೂಡಿಕೆಗಳ ಮೊಬಲಗಿನಿಂದ ಕಡಿತವಾಗಿದೆಯೆಂದು ಮತ್ತು ಅಂಥ ಹೊರತುಪಡಿಸಲಾದ ಪುಸ್ತಕ ಋಣಗಳನ್ನು ವಸೂಲು ಮಾಡುವ ಮತ್ತು ಇಟ್ಟುಕೊಳ್ಳುವ ಕಂಪನಿಯ ಹಕ್ಕು ಈ ಅಧಿನಿಯಮದ ಮೂಲಕ ಅಬಾಧಿತವಾಗಿ ಉಳಿಯತಕ್ಕದ್ದೆಂದು ತಿಳಿಸಬಹುದು.

**10. ಕೆಲವು ಒಪ್ಪಂದಗಳನ್ನು ನಿರಾಕರಿಸಲು ಸರ್ಕಾರದ ಹಕ್ಕು.–** (1) 9ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳುವುದು ಅಥವಾ ಅದರ ಯಾವುದೇ ನಿಬಂಧನೆಗಳ ಅಡಿಯಲ್ಲಿ ಸರ್ಕಾರವು ಹೊಂದಿರುವ ಅಥವಾ ಹೊಂದುವ ಹೊಣೆಗಾರಿಕೆಗಳು ಕಂಪನಿಯ ಕಾರ್ಯಚಟುವಟಿಕೆಗಳ ಉದ್ದೇಶಕ್ಕಾಗಿ ಯುಕ್ತವಾಗಿ ಅವಶ್ಯವಾಗಿಲ್ಲವೆಂದು ಅಥವಾ ಅವನ್ನು ಸದ್ಭಾವನೆಯಿಂದ ಮಾಡಿಕೊಂಡಿಲ್ಲವೆಂದು ಸರ್ಕಾರಕ್ಕೆ ಕಂಡುಬಂದರೆ, ಸರ್ಕಾರವು, ಅದನ್ನು ರದ್ದುಪಡಿಸುವ ಅಥವಾ ಅಂಥ ಒಪ್ಪಂದ (ಬೇಷರತ್ತಾಗಿ ಅಥವಾ ವಿಧಿಸುವುದು ಯುಕ್ತವೆಂದು ತಾನು ಭಾವಿಸುವಂಥ ಷರತ್ತುಗಳಿಗೆ ಒಳಪಟ್ಟು) ರದ್ದುಪಡಿಸುವ ಅಥವಾ ಮಾರ್ಪಡಿಸುವ ಆದೇಶವನ್ನು ಹೊರಡಿಸಬಹುದು ಮತ್ತು ಆ ತರುವಾಯ ಒಪ್ಪಂದವು ಅದಕ್ಕನುಸಾರವಾಗಿ ಪರಿಣಾಮ ಹೊಂದಿರತಕ್ಕದ್ದು:

ಪರಂತು, ಪಕ್ಷಕರರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು ಯಾವುದೇ ಒಪ್ಪಂದವನ್ನು ರದ್ದುಪಡಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಗೊತ್ತುಪಡಿಸಬಹುದಾದಂಥ ಅವಧಿಯೊಳಗಾಗಿ ಅಂಥ ಆದೇಶವನ್ನು ಮಾರ್ಪಾಟುಗೊಳಿಸಲು ಅಥವಾ ರದ್ದುಪಡಿಸಲು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಬಹುದು ಮತ್ತು ಆ ತರುವಾಯ ನ್ಯಾಯಾಮಂಡಳಿಯು ಅಂಥ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

**11. ಕಂಪನಿಯ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು.–** (1) 10ನೇ ಮತ್ತು 13ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಬಲದಿಂದಾಗಿ ಸರ್ಕಾರದಲ್ಲಿ ನಿಹಿತಗೊಂಡ ಉದ್ಯಮಗಳ ವ್ಯವಹಾರಗಳ ಸಂಬಂಧದಲ್ಲಿ ನಿಹಿತಗೊಂಡ ದಿನಾಂಕಕ್ಕೆ ಮೊದಲು ನಿಯೋಜಿತನಾಗಿದ್ದ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು (ನಿರ್ದೇಶಕ, ಸಲಹೆಗಾರ, ಗ್ರಾಹಕ ಅಥವಾ ಲೆಕ್ಕಪರಿಶೋಧಕರ ಹೊರತಾಗಿ) ಆ ದಿನಾಂಕದಿಂದ, ಸಂದರ್ಭಾನುಸಾರ, ಸರ್ಕಾರದ ಒಬ್ಬ ಅಧಿಕಾರಿ ಅಥವಾ ಇತರ ನೌಕರನಾಗತಕ್ಕದ್ದು ಮತ್ತು ಅವನು ಕಂಪನಿಯ ಉದ್ಯಮಗಳನ್ನು ಸರ್ಕಾರದಲ್ಲಿ ನಿಹಿತಗೊಳಿಸಿರದಿದ್ದರೆ ಅವನು ಕಂಪನಿಯ ಅಧೀನದಲ್ಲಿ ಹೊಂದಿರುತ್ತಿದ್ದ ಅದೇ ಅವಧಿ, ಅದೇ ಸಂಭಾವನೆಯಲ್ಲಿ ಮತ್ತು ಅದೇ ನಿಬಂಧನೆ ಮತ್ತು ಷರತ್ತುಗಳ ಮೇಲೆ ಅದೇ ಹುದ್ದೆಯನ್ನು ಅಥವಾ ಸೇವೆಯನ್ನು ಮತ್ತು ನಿವೃತ್ತಿ ವೇತನ, ಉಪದಾನ ಮತ್ತು ಇತರ ವಿಷಯಗಳ ಬಗ್ಗೆ ಅದೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವನಿಗೆ ಲಿಖಿತದಲ್ಲಿ ಮೂರು ಕ್ಯಾಲೆಂಡರ್ ತಿಂಗಳ ನೋಟೀಸು ನೀಡಿದ ನಂತರ ಅಥವಾ ಅಂಥ

ನೋಟೀಸಿನ ಬದಲಾಗಿ ಮೂರು ತಿಂಗಳ ವೇತನವನ್ನು ಸಂದಾಯ ಮಾಡಿದ ನಂತರ, ಸರ್ಕಾರದ ಅಡಿಯಲ್ಲಿನ ಅವನ ಉದ್ಯೋಗವನ್ನು ಕೊನೆಗೊಳಿಸಿದ ಹೊರತು ಅಥವಾ ಕೊನೆಗೊಳಿಸುವವರೆಗೆ ಅಥವಾ ಅವನ ಸಂಭಾವನೆಯನ್ನು, ಅವನ ನಿವೃತ್ತಿ ವೇತನ ಮತ್ತು ಉಪದಾನಗಳಿಗೆ ಸಂಬಂಧಿಸಿದ ವಿಶೇಷ ಹಕ್ಕುಗಳು ಸೇರಿದಂತೆ ನಿಬಂಧನೆ ಮತ್ತು ಷರತ್ತುಗಳನ್ನು ಸರ್ಕಾರವು ರಚಿಸುವ ನಿಯಮಗಳಿಂದ ಅಥವಾ ಆದೇಶಗಳಿಂದ ಬದಲಾಯಿಸುವವರೆಗೆ ಹಾಗೆ ಹೊಂದಿರುವುದು ಮುಂದುವರಿಯತಕ್ಕದ್ದು:

ಪರಂತು, ತಾನು ನೇಮಕಗೊಂಡ ದಿನದಿಂದ ಮೂವತ್ತು ದಿನಗಳೊಳಗಾಗಿ, ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ಸರ್ಕಾರದಿಂದ ನೇಮಕವಾದ ಯಾರೇ ವ್ಯಕ್ತಿಗೆ, ತಾನು ಸರ್ಕಾರದ ಒಬ್ಬ ಅಧಿಕಾರಿ ಅಥವಾ ಇತರ ನೌಕರನಾಗುವುದಿಲ್ಲವೆಂಬ ತನ್ನ ಉದ್ದೇಶವನ್ನು ಲಿಖಿತದಲ್ಲಿ ತಿಳಿಸುವ ಯಾವನೇ ಅಧಿಕಾರಿಗೆ ಅಥವಾ ನೌಕರನಿಗೆ ಈ ಉಪ-ಪ್ರಕರಣದಲ್ಲಿ ಇರುವ ಯಾವುದೂ ಅನ್ವಯವಾಗತಕ್ಕದ್ದಲ್ಲ.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರಲ್ಲಿ (1947ರ ಕೇಂದ್ರ ಅಧಿನಿಯಮ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಬಲದಿಂದ ಮಾಡುವ ಕಂಪನಿಯ ಯಾರೇ ಅಧಿಕಾರಿ ಅಥವಾ ಇತರ ನೌಕರನ ಸೇವಾ ವರ್ಗಾವಣೆಯು, ಈ ಅಧಿನಿಯಮದ ಅಥವಾ ಇತರ ಕಾನೂನಿನ ಅಡಿಯಲ್ಲಿ ಯಾವುದೇ ಪರಿಹಾರಕ್ಕೆ ಅಂಥ ಯಾವನೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ ಹಕ್ಕು ನೀಡತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಮಂಡಳಿ ಅಥವಾ ಇತರ ಪ್ರಾಧಿಕಾರವು ಪರಿಗಣಿಸತಕ್ಕದ್ದಲ್ಲ.

**12. ಭವಿಷ್ಯ ನಿಧಿ ಮತ್ತು ಇತರ ನಿಧಿಗಳು.–** (1) ಒಂದು ಕಂಪನಿಯು, ಅದರ ಅಧಿಕಾರಿಗಳ ಅಥವಾ ಇತರ ನೌಕರರ ಪ್ರಯೋಜನಕ್ಕಾಗಿ ಭವಿಷ್ಯನಿಧಿ, ಸೇವಾ ನಿವೃತ್ತಿ ನಿಧಿ, ಕಲ್ಯಾಣ ನಿಧಿ ಅಥವಾ ಇತರ ನಿಧಿಯನ್ನು ಸ್ಥಾಪಿಸಿರುವಲ್ಲಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಯಾರ ಸೇವೆಗಳನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಲಾಗಿದೆಯೋ ಆ ಅಧಿಕಾರಿಗಳ ಅಥವಾ ಇತರ ನೌಕರರ ಲೆಕ್ಕದಲ್ಲಿ, ಅಂಥ ಭವಿಷ್ಯ ನಿಧಿಯ, ಸೇವಾ ನಿವೃತ್ತಿ ನಿಧಿಯ, ಕಲ್ಯಾಣ ನಿಧಿಯ ಅಥವಾ ಇತರ ನಿಧಿಯ ಲೆಕ್ಕದಲ್ಲಿ, ನಿಹಿತಗೊಂಡ ದಿನಾಂಕದಂದು ಇದ್ದ ಹಣವು ಸರ್ಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಹಾಗೆ ಸರ್ಕಾರಕ್ಕೆ ವರ್ಗಾವಣೆಯಾದ ಹಣಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಸರ್ಕಾರವು ವ್ಯವಹರಿಸತಕ್ಕದ್ದು.

**13. ಆಸ್ತಿಗಳ ಅಪವ್ಯಯಕ್ಕೆ ಕಾರಣವಾಗುವ ವ್ಯವಹಾರ.–** (1) ಕಂಪನಿಯು, 1972ರ ಜನವರಿ ಮೊದಲ ದಿನದ ತರುವಾಯ ಮತ್ತು ನಿಹಿತಗೊಂಡ ದಿನಾಂಕಕ್ಕೆ ಮುಂಚೆ,–

(ಎ) ಪ್ರತಿಫಲವಿಲ್ಲದೆ ಅಥವಾ ಕಡಿಮೆ ಪ್ರತಿಫಲಕ್ಕೆ ಯಾವನೇ ವ್ಯಕ್ತಿಗೆ ಯಾವುದೇ ಸಂದಾಯವನ್ನು ಮಾಡಿರುವಲ್ಲಿ;

(ಬಿ) ಪ್ರತಿಫಲವಿಲ್ಲದೆ ಅಥವಾ ಕಡಿಮೆ ಪ್ರತಿಫಲಕ್ಕೆ ಅದರ ಯಾವುದೇ ಸ್ವತ್ತುಗಳನ್ನು ಅಥವಾ ಹಕ್ಕುಗಳನ್ನು ಮಾರಾಟ ಮಾಡಿದ್ದರೆ ಅಥವಾ ವಿಲೆ ಮಾಡಿದ್ದರೆ;

(ಸಿ) ಅಧಿಕ ಪ್ರತಿಫಲ ನೀಡಿ ಯಾವುದೇ ಸ್ವತ್ತು ಅಥವಾ ಹಕ್ಕುಗಳನ್ನು ಪಡೆದುಕೊಂಡಿದ್ದರೆ;

(ಡಿ) ಕಂಪನಿಯು ಅಧಿಕ ಪ್ರತಿಫಲ ನೀಡುವುದನ್ನು ಅಗತ್ಯಪಡಿಸುವ ಅಥವಾ ಹಾಗೆ ನೀಡಿರುವ ಯಾವುದೇ ಒಪ್ಪಂದವನ್ನು ಮಾಡಿಕೊಂಡಿದ್ದರೆ ಅಥವಾ ಅದನ್ನು ಬದಲಾಯಿಸಿದ್ದರೆ;

(ಇ) ಕಂಪನಿಗೆ ಪ್ರಾಪ್ತವಾಗುವ ಯಾವುದೇ ಪ್ರಯೋಜನವನ್ನು ಮೀರಿ ಕಂಪನಿಗೆ ನಷ್ಟ ಉಂಟುಮಾಡುವ ಅಥವಾ ಅದರ ಮೇಲೆ ಹೊಣೆಗಾರಿಕೆ ವಿಧಿಸುವ ಗುರುತರ ಸ್ವರೂಪದ ಇತರ ಯಾವುದೇ ವ್ಯವಹಾರವನ್ನು ಮಾಡಿದ್ದರೆ;

(ಎಫ್) ಹತ್ತು ಸಾವಿರ ರೂಪಾಯಿಗಳನ್ನು ಮೀರಿದ ಪುಸ್ತಕ ಮೌಲ್ಯದ ಯಾವುದೇ ಸಾಧನ ಸಲಕರಣೆ ಅಥವಾ ಯಂತ್ರೋಪಕರಣ ಅಥವಾ ಇತರ ಸ್ವತ್ತನ್ನು ಮಾರಾಟ ಮಾಡಿದ್ದರೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಿದ್ದರೆ; ಮತ್ತು

ಹಣ ಸಂದಾಯ, ಮಾರಾಟ, ವಿಲೇವಾರಿ, ಸ್ವಾಧೀನತೆ, ಒಪ್ಪಂದ ಕರಾರು ಅಥವಾ ಅದರಲ್ಲಿ ಬದಲಾವಣೆ ಅಥವಾ ಇತರ ವ್ಯವಹಾರ ಅಥವಾ ವರ್ಗಾವಣೆ, ಕಂಪನಿಯ ಉದ್ಯಮಗಳನ್ನು ನಡೆಸಿಕೊಂಡು ಹೋಗುವ ಉದ್ದೇಶಕ್ಕಾಗಿ ಯುಕ್ತವಾಗಿ ಅವಶ್ಯವಿರದಿದ್ದರೆ ಅಥವಾ ಎರಡೂ ಸಂದರ್ಭಗಳಲ್ಲಿ ಆ ಸಮಯದಲ್ಲಿ ಇದ್ದ ಸಂಗತಿಗಳನ್ನು ಗಮನಿಸಿ ಕಂಪನಿಯು ಪೂರ್ವಾಪರ ವಿವೇಚನೆ ಇಲ್ಲದೆ ಮಾಡಿದ್ದಾಗಿದ್ದರೆ

– ಈ ಪ್ರಕರಣವು ಅನ್ವಯವಾಗತಕ್ಕದ್ದು.

(2) ಸರ್ಕಾರವು, ನಿಹಿತಗೊಂಡ ದಿನಾಂಕದಿಂದ [1][ಐದು ವರ್ಷ][1]ಗಳೊಳಗೆ ಯಾವುದೇ ಸಮಯದಲ್ಲಿ, ಈ ಪ್ರಕರಣವು ಅನ್ವಯಿಸುತ್ತದೆ ಎಂದು ಸರ್ಕಾರವು ಅಭಿಪ್ರಾಯ ಪಡುವಂಥ ಯಾವುದೇ ವ್ಯವಹಾರದ ಸಂಬಂಧದಲ್ಲಿ ನ್ಯಾಯಮಂಡಳಿಗೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಬಹುದು ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲ ಪಕ್ಷಕಾರರನ್ನು ನ್ಯಾಯಮಂಡಳಿಯು ಅನ್ಯಥಾ ನಿರ್ದೇಶಿಸಿದ ಹೊರತು, ಅರ್ಜಿಗೆ ಪಕ್ಷಕಾರರನ್ನಾಗಿ ಮಾಡತಕ್ಕದ್ದು.

1. 1978ರ ಅಧಿನಿಯಮ 23ರ ಮೂಲಕ 18.12.1974ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಯಾವ ವ್ಯವಹಾರಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಅದು ಈ ಪ್ರಕರಣವು ಅನ್ವಯವಾಗುವಂಥ ವ್ಯವಹಾರವಾಗಿದೆ ಎಂದು ನ್ಯಾಯಮಂಡಳಿಗೆ ಮನದಟ್ಟಾದರೆ, ಆ ತರುವಾಯ, ವ್ಯವಹಾರದ ಆ ಸಮಯದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಮಾಡಿದ ಸರಿಯಾದ ವ್ಯವಹಾರವಾಗಿತ್ತು ಎಂದು ಮತ್ತು ಅದು ಈ ಅಧಿನಿಯಮದ ಮೂಲಕ ರಚಿಸಿದ ಅಥವಾ ರಚಿಸಲು ಉದ್ದೇಶಿಸಿರುವ ಯಾವುದೇ ಉಪಬಂಧಗಳಿಗೆ ಯಾವುದೇ ರೀತಿಯಿಂದಲೂ ಸಂಬಂಧಿಸಿರಲಿಲ್ಲವೆಂದೂ ಸಹ ನ್ಯಾಯಮಂಡಳಿಗೆ ಮನದಟ್ಟಾದ ಹೊರತು, ನ್ಯಾಯಮಂಡಳಿಗೆ, ಪಕ್ಷಕಾರರು ವ್ಯವಹಾರಕ್ಕೆ ಎಷ್ಟರಮಟ್ಟಿಗೆ ಜವಾಬ್ದಾರರಾಗಿದ್ದಾರೆ ಅಥವಾ ಅದರಿಂದ ಎಷ್ಟು ಅನುಕೂಲ ಪಡೆದಿದ್ದಾರೆ ಎಂಬುದನ್ನು ಮತ್ತು ಪ್ರಕರಣದ ಎಲ್ಲ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು ಅದು ನ್ಯಾಯಸಮ್ಮತವೆಂದು ಭಾವಿಸುವಂತೆ ಅರ್ಜಿಯ ಯಾರೇ ಪಕ್ಷಕಾರರ ವಿರುದ್ಧ ಅಂಥ ಆದೇಶವನ್ನು ಮಾಡತಕ್ಕದ್ದು.

(4) ಯಾವುದೇ ವ್ಯವಹಾರದ ಸಂಬಂಧದಲ್ಲಿ ಈ ಪ್ರಕರಣದ ಅಡಿಯಲ್ಲಿ ನ್ಯಾಯಮಂಡಳಿಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಮತ್ತು ಆ ಅರ್ಜಿಯನ್ನು ಸರ್ಕಾರದ ಪರವಾಗಿ ನಿರ್ಣಯಿಸಿದ್ದಲ್ಲಿ, ನ್ಯಾಯಮಂಡಲಿಯು, ಆ ವ್ಯವಹಾರದ ಸಂಬಂಧದಲ್ಲಿ ಬಾಕಿ ಇರುವ ಯಾವುವೇ ಕ್ಲೇಮುಗಳನ್ನು ತೀರ್ಮಾನಿಸಲು ಪ್ರತ್ಯೇಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು. ಅಂಥ ಯಾವುದೇ ಅರ್ಜಿಯ ಸಂಬಂಧದಲ್ಲಿ, ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಕಂಪನಿಗೆ ಸಂದಾಯ ಮಾಡಬೇಕಾದ ಮೊಬಲಗಿನಿಂದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವ್ಯವಹಾರದಿಂದಾಗಿ ಸರ್ಕಾರಕ್ಕೆ ಉಂಟಾದ ನಷ್ಟವೆಂಬುದಾಗಿ ಪರಿಗಣಿಸಬಹುದಾದಂಥ ಮೊಬಲಗನ್ನು ಕಡಿತಗೊಳಿಸುವಂತೆ ನ್ಯಾಯಮಂಡಳಿಯು ಸರ್ಕಾರಕ್ಕೆ ಆದೇಶಿಸಬಹುದು.

(5) (4)ನೇ ಉಪ–ಪ್ರಕರಣದ ಮೇರೆಗೆ ಕಡಿತ ಮಾಡಬೇಕೆಂದು ನ್ಯಾಯಮಂಡಳಿಯು ಆದೇಶಿಸಿದ ಯಾವುದೇ ಮೊಬಲಗು ಕಂಪನಿಗೆ ಸಂದಾಯ ಮಾಡಲಾಗುವ ಮೊಬಲಗಿನ ಮೇಲಿನ ಮೊದಲ ಹೊಣೆಯಾಗಿರತಕ್ಕದ್ದು ಮತ್ತು ಕಂಪನಿಗೆ

ಸಂದಾಯ ಮಾಡಬೇಕಾದ ಮೊಬಲಗಿನ ಸಂಬಂಧದಲ್ಲಿ ಯಾವನೇ ವ್ಯಕ್ತಿಯ ಎಲ್ಲ ಕ್ಲೇಮುಗಳಿಗಿಂತಲೂ ಮೊದಲ ಆದ್ಯತೆ ಹೊಂದಿರತಕ್ಕದ್ದು.

(6) (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮೊದಲ ಹೊಣೆಯನ್ನು ಪೂರೈಸುವ ಉದ್ದೇಶಕ್ಕಾಗಿ, ಸರ್ಕಾರವು, 5ನೇ ಪ್ರಕರಣದ ಅಡಿಯಲ್ಲಿ ಕಂಪನಿಗೆ ಸಂದಾಯ ಮಾಡಬೇಕಾದ ಮೊಬಲಗಿನಿಂದ ಶೇಕಡಾ ಹತ್ತರಷ್ಟನ್ನು ತಡೆಹಿಡಿಯತಕ್ಕದ್ದು.

(7) (5)ನೇ ಉಪ-ಪ್ರಕರಣದ ಅಡಿಯಲ್ಲಿ ಸರ್ಕಾರದ ಪರವಾಗಿ ಮೊದಲ ಹೊಣೆಯನ್ನು ಪೂರೈಸಿದ ತರುವಾಯ, (6)ನೇ ಉಪ-ಪ್ರಕರಣದ ಅಡಿಯಲ್ಲಿ ತಡೆಹಿಡಿದಿದ್ದ ಮೊಬಲಗಿನ ಯಾವುದಾದರೂ ಶಿಲ್ಕು ಇದ್ದರೆ ಅದನ್ನು ಕಂಪನಿಗೆ ಸಂದಾಯ ಮಾಡತಕ್ಕದ್ದು:

ಪರಂತು, (5)ನೇ ಉಪ-ಪ್ರಕರಣದ ಅಡಿಯಲ್ಲಿ ಮೊದಲ ಹೊಣೆಯನ್ನು ಪೂರೈಸಲು ಸಾಕಷ್ಟಾಗುತ್ತದೆಂದು ನ್ಯಾಯಮಂಡಳಿಯು ಅಭಿಪ್ರಾಯಪಡುವಂಥ ಮೊತ್ತಕ್ಕಿಂತ ಹೆಚ್ಚಿಗೆಯಾದ ಮೊತ್ತವನ್ನು ಸಂದಾಯ ಮಾಡುವಂತೆ ಸೂಚಿಸಿ ಮುಂಚಿತವಾಗಿ ಯಾವುದೇ ಸಮಯದಲ್ಲಿ ಆದೇಶವನ್ನು ಹೊರಡಿಸಬಹುದು:

ಮತ್ತೂ ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿನ ಎಲ್ಲ ಸಂದಾಯಗಳನ್ನು ನಿಹಿತಗೊಳಿಸಿದ ದಿನಾಂಕದಿಂದ ಶೇಕಡಾ ಅರ್ಧದಷ್ಟು ಬಡ್ಡಿಯೊಂದಿಗೆ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

**14. ನ್ಯಾಯಮಂಡಳಿಯ ರಚನೆ ಮತ್ತು ಅಧಿಕಾರಗಳು.-** (1) ಸರ್ಕಾರವು, ಅಧಿಸೂಚನೆಯ ಮೂಲಕ, ಜಿಲ್ಲಾ ನ್ಯಾಯಾಧೀಶರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಒಳಗೊಂಡಂತೆ ಒಂದು ನ್ಯಾಯಮಂಡಳಿಯನ್ನು ರಚಿಸತಕ್ಕದ್ದು.

(2) [1][5, 6, 7, 7ಎ, 10 ಮತ್ತು 13ನೇ ಪ್ರಕರಣಗಳ ಅಡಿಯಲ್ಲಿ][1] ಯಾವುದೇ ವಿಷಯವನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ, ನ್ಯಾಯಮಂಡಳಿಯು, ಅಂಥ ವಿಷಯದ ಸಂಬಂಧದಲ್ಲಿ ಅವರ ವಾದವನ್ನು ಮಂಡಿಸಲು ಯಾವನೇ ಅಥವಾ ಎಲ್ಲ ಪಕ್ಷಕಾರರನ್ನು ಅಗತ್ಯಪಡಿಸಬಹುದು ಮತ್ತು ಪ್ರಕರಣವನ್ನು ತೀರ್ಮಾನಿಸಲು ಅವಶ್ಯವಿರಬಹುದಾದಂಥ ಸಾಕ್ಷ್ಯವನ್ನು ಒದಗಿಸುವಂತೆ ಅವರಿಗೆ ಆದೇಶಿಸಬಹುದು.

1. 1995ರ ಅಧಿನಿಯಮ 9ರ ಮೂಲಕ 18.12.1974ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ನ್ಯಾಯ ಮಂಡಳಿಯು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ V) ರ ಅಡಿಯಲ್ಲಿನ ಒಂದು ದಾವೆಯ ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯಕ್ಕೆ ಇರುವ ಅಧಿಕಾರಗಳನ್ನು ಹೊಂದಿರತಕ್ಕದ್ದು:-

(ಎ) ಯಾವನೇ ವ್ಯಕ್ತಿಗೆ ಸಮನು ನೀಡುವುದು ಮತ್ತು ಆತನ ಹಾಜರಾತಿಗಳನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣವಚನದ ಮೇಲೆ ವಿಚಾರಣೆಗೊಳಪಡಿಸುವುದು;

(ಬಿ) ದಸ್ತಾವೇಜುಗಳನ್ನು ಶೋಧಿಸಲು ಮತ್ತು ಅವುಗಳನ್ನು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಕಮಿಷನುಗಳನ್ನು ಹೊರಡಿಸುವುದು;

(ಇ) ಗೊತ್ತುಪಡಿಸಬಹುದಾದಂಥ ಇತರ ವಿಷಯಗಳು.

(4) ನ್ಯಾಯಮಂಡಳಿಯು ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸಬಹುದು ಮತ್ತು ದಾಖಲೆಯಲ್ಲಿನ ಸಂಗತಿಯು ತಪ್ಪಾಗಿರುವ ಸಂದರ್ಭದಲ್ಲಿ ತನ್ನ ನಿರ್ಣಯವನ್ನು ಪುನರ್ ಪರಿಶೀಲಿಸಬಹುದು ಅಥವಾ ಅದರಲ್ಲಿನ ಯಾವುದೇ ಅಂಕಿಗಳ ಅಥವಾ ಲಿಪಿಕ ದೋಷವನ್ನು ಸರಿಪಡಿಸಬಹುದು. ಆದರೆ ಅದಕ್ಕೆ ಒಳಪಟ್ಟು ಮತ್ತು (5)ನೇ ಉಪ-ಪ್ರಕರಣದ

ಉಪಬಂಧಗಳಿಗೊಳಪಟ್ಟು ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ವಿಷಯದ ಮೇಲಿನ ನ್ಯಾಯಮಂಡಳಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(5) ನ್ಯಾಯಮಂಡಳಿಯ ಯಾವುದೇ ಆದೇಶದಿಂದ ಬಾಧಿತವಾದ ಸರ್ಕಾರ ಅಥವಾ ಯಾವನೇ ವ್ಯಕ್ತಿಯು, ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಉಚ್ಚ ನ್ಯಾಯಾಲಯವು, ಅದರ ಮೇಲೆ ತಾನು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು.

**15. ದಂಡನೆಗಳು.–** (1) ಯಾವನೇ ವ್ಯಕ್ತಿಯು, 8ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಅವನ ಸ್ವಾಧೀನತೆಯಲ್ಲಿರಬಹುದಾದ ಯಾವುದೇ ದಸ್ತಾವೇಜುಗಳನ್ನು ಉದ್ದೇಶ ಪೂರ್ವಕವಾಗಿ ತಡೆಹಿಡಿದರೆ ಅಥವಾ ಸರ್ಕಾರಕ್ಕೆ ಒಪ್ಪಿಸಲು ತಪ್ಪಿದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಕಂಪನಿಯ ಯಾವುದೇ ಸ್ವತ್ತಿನ ಸ್ವಾಧೀನತೆಯನ್ನು ಅಕ್ರಮವಾಗಿ ಪಡೆದಿದ್ದರೆ ಅಥವಾ ಆತನ ಸ್ವಾಧೀನತೆಯಲ್ಲಿ ಯಾವುದೇ ಅಂಥ ಸ್ವತ್ತು ಇದ್ದು ಅದನ್ನು ಸರ್ಕಾರಕ್ಕೆ ಒಪ್ಪಿಸದೆ ಅಕ್ರಮವಾಗಿ ತಡೆಹಿಡಿದಿದ್ದರೆ ಅಥವಾ ಈ ಅಧಿನಿಯಮದಲ್ಲಿ ವ್ಯಕ್ತಪಡಿಸಿದ ಅಥವಾ ಅಧಿಕೃತಗೊಳಿಸಿದ ಉದ್ದೇಶಗಳನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಅದನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದ್ದರೆ, ಅವನು ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ಅಥವಾ ಐದುಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಮುಂದುವರಿದ ಅಪರಾಧದ ಸಂದರ್ಭದಲ್ಲಿ, ಯಾವ ಮೊದಲ ಅಪರಾಧದ ಅವಧಿಯ ತರುವಾಯ ಅಪರಾಧ ಮುಂದುವರಿಸಿದ ಅವಧಿಯ ಪ್ರತಿಯೊಂದು ದಿನಕ್ಕೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅನುಚಿತವಾಗಿ ಪಡೆದುಕೊಂಡ ಅಥವಾ ಅಕ್ರಮವಾಗಿ ತಡೆಹಿಡಿದ ಅಥವಾ ಉದ್ದೇಶಪೂರ್ವಕವಾಗಿ ದುರ್ಬಳಕೆ ಮಾಡಿಕೊಂಡ ಅಂಥ ಯಾವುದೇ ದಸ್ತಾವೇಜನ್ನು ಅಥವಾ ಸ್ವತ್ತನ್ನು ನಿಗದಿಪಡಿಸಬಹುದಾದ ಸಮಯದೊಳಗೆ ಅಪರಾಧದ ಅಧಿವಿಚಾರಣೆ ನಡೆಸುವ ನ್ಯಾಯಾಲಯವು ಒಪ್ಪಿಸುವಂತೆ ಅಥವಾ ಹಿಂದಿರುಗಿಸುವಂತೆ ಮತ್ತು ಅದಕ್ಕೆ ತಪ್ಪಿದಲ್ಲಿ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಮತ್ತಷ್ಟು ಅವಧಿಯ ಕಾರಾವಾಸ ಅನುಭವಿಸುವಂತೆ ಆದೇಶಿಸಬಹುದು.

(2) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಯಾವುದೇ ಉಪಬಂಧಗಳನ್ನು ಅಥವಾ ಅದರ ಅನುಸರಣೆಯಲ್ಲಿ ನೀಡಿದ ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಯುಕ್ತ ಕಾರಣವಿಲ್ಲದೆ ಪಾಲಿಸಲು ವಿಫಲನಾದ ಯಾವನೇ ವ್ಯಕ್ತಿಯು, ಈ ವಿಫಲತೆಯು (1)ನೇ ಉಪ–ಪ್ರಕರಣದ ಅಡಿಯಲ್ಲಿ ಬರದಿದ್ದರೆ, ಐದುಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿದ ಅಪರಾಧದ ಸಂದರ್ಭದಲ್ಲಿ, ಯಾವ ಮೊದಲ ಅಪರಾಧದ ಅವಧಿಯ ತರುವಾಯ ಮುಂದುವರಿದ ಅವಧಿಯ ಪ್ರತಿಯೊಂದು ದಿನಕ್ಕೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಯಾವುದೇ ನ್ಯಾಯಾಲಯವು, ಸರ್ಕಾರದ ಅಥವಾ ಈ ಸಂಬಂಧದಲ್ಲಿ ಅಧಿಕೃತನಾದ ಅಧಿಕಾರಿಯ ಪೂರ್ವಮಂಜೂರಾತಿ ಪಡೆಯದೆ ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**16. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಸಮಯದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರ ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು

ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಯನ್ನು ಮುಂದುವರಿಸಲು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಇರುವ ಯಾವುದೂ, ಅಂಥ ಯಾರೇ ವ್ಯಕ್ತಿಯು, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ಸಂಭವಿಸಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಎಚ್ಚರಿಕೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದಿಂದ ಅದು ನಡೆದಿದೆ ಎಂದು ಆರೋಪಿಸುವುದು ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ ಎಂದು ಅರ್ಥ.

**17. ಅಧಿನಿಯಮದ ಅಡಿಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.**- ಈ ಅಧಿನಿಯಮಕ್ಕೆ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳಿಗೆ ಅಥವಾ ಆದೇಶಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಸರ್ಕಾರದ ಅಥವಾ ಸರ್ಕಾರದ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಅಥವಾ ಸರ್ಕಾರದ ಅಥವಾ ಸರ್ಕಾರದ ಯಾರೇ ಅಧಿಕಾರಿಯ ಅಥವಾ ನೌಕರನ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**18. ನಿಯಮಗಳನ್ನು ರಚಿಸಲು ಅಧಿಕಾರ.**- ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

**19. ತೊಂದರೆಗಳನ್ನು ನಿವಾರಿಸಲು ಅಧಿಕಾರ.**- ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುವೇ ತೊಂದರೆಗಳು ಉದ್ಭವಿಸಿದಲ್ಲಿ, ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ, ಅಧಿಸೂಚಿತ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

**20. ನಿಯಮಗಳನ್ನು ಮತ್ತು ಆದೇಶಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.**- ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 19ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ

ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಅದರ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆದೇಶವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**21. ಇತರ ಕಾನೂನುಗಳ ಪರಿಣಾಮ.–** (1) ವಿದ್ಯುಚ್ಛಕ್ತಿ ಅಧಿನಿಯಮದ ಅಥವಾ ವಿದ್ಯುತ್ ಸರಬರಾಜು ಅಧಿನಿಯಮದ ಅಥವಾ ಆ ಯಾವುವೇ ಅಧಿನಿಯಮಗಳ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಥವಾ ಆ ಯಾವುವೇ ಅಧಿನಿಯಮಗಳ ಅಥವಾ ಅವುಗಳ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ ಬಲದಿಂದ ಪರಿಣಾಮಕಾರಿಯಾಗುವ ಯಾವುದೇ ಲಿಖಿತದ ಯಾವುದೇ ಉಪಬಂಧವು ಈ ಅಧಿನಿಯಮದ ಯಾವುವೇ ಉಪಬಂಧಗಳೊಂದಿಗೆ ಅದು ಅಸಂಗತವಾಗಿರುವ ಮಟ್ಟಿಗೆ ಯಾವುದೇ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ವಿದ್ಯುಚ್ಛಕ್ತಿ ಅಧಿನಿಯಮದ ಮತ್ತು ವಿದ್ಯುತ್ ಸರಬರಾಜು ಅಧಿನಿಯಮದ ಜೊತೆಗೆ ಇರತಕ್ಕದ್ದು ಮತ್ತು ಅವುಗಳನ್ನು ಕುಂಠಿತಗೊಳಿಸತಕ್ಕದ್ದಲ್ಲ.

**22. ಸ್ವಇಚ್ಛೆಯಿಂದ ಸರ್ಕಾರಕ್ಕೆ ವಹಿಸಿದ ಉದ್ಯಮಕ್ಕೆ ಅಧಿನಿಯಮವು ಅನ್ವಯಿಸುವುದು.–** ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ, ಕಂಪನಿಯು ಸ್ವಇಚ್ಛೆಯಿಂದ ಉದ್ಯಮವನ್ನು ಸರ್ಕಾರಕ್ಕೆ ಒಪ್ಪಿಸಿರುವಲ್ಲಿ ಮತ್ತು ಸರ್ಕಾರವು ಅಂಥ ಉದ್ಯಮವನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವಲ್ಲಿ, ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಅಡಿಯಲ್ಲಿ ಅಂಥ ಉದ್ಯಮವು ಸರ್ಕಾರದಲ್ಲಿ ನಿಹಿತಗೊಂಡಿದ್ದರೆ ಹೇಗೋ ಹಾಗೆ ಅಂಥ ಉದ್ಯಮಕ್ಕೆ ಅನ್ವಯವಾಗತಕ್ಕದ್ದು. ಈ ಅಧಿನಿಯಮದ ಎಲ್ಲ ಉಪಬಂಧಗಳು ಅದಕ್ಕನುಸಾರವಾಗಿ ಅಂಥ ಉದ್ಯಮಕ್ಕೆ ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ ಯಾವುದಾದರೂ ಅವಧಿಯನ್ನು ನಿಹಿತವಾದ ದಿನಾಂಕದಿಂದ ಲೆಕ್ಕಹಾಕಬೇಕಾಗಿದ್ದರೆ, ಅಂಥ ಅವಧಿಯನ್ನು, ಈ ಪ್ರಕರಣವು ಅನ್ವಯವಾಗುವಂಥ ಯಾವುದೇ ಉದ್ಯಮದ ಸಂಬಂಧದಲ್ಲಿ, ಈ ಅಧಿನಿಯಮವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

**ಅನುಸೂಚಿ**

**(5ನೇ ಪ್ರಕರಣವನ್ನು ನೋಡಿ)**

5ನೇ ಪ್ರಕರಣದ ಅಡಿಯಲ್ಲಿ ಮೊಬಲಗನ್ನು ಸಂದಾಯ ಮಾಡುವ ಉದ್ದೇಶಗಳಿಗಾಗಿ, ಸವಕಳಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರತಿಯೊಂದು ಆಸ್ತಿಯ ಪುಸ್ತಕ ಮೌಲ್ಯದ ಶೇಕಡಾ ತೊಂಬತ್ತರಷ್ಟನ್ನು ಆಸ್ತಿಯು ಬಾಳಿಕೆಯಲ್ಲಿರುವ ವರ್ಷಗಳ ಸಂಖ್ಯೆಯಿಂದ ಭಾಗಿಸಿದಾಗ ಬಂದ ವಾರ್ಷಿಕ ದರಗಳಲ್ಲಿ ಲೆಕ್ಕಹಾಕತಕ್ಕದ್ದು. ಆಸ್ತಿಯನ್ನು ಪ್ರಯೋಜನಕಾರಿ ಬಳಕೆಗೆ ತಂದ ಲೆಕ್ಕ ವರ್ಷಕ್ಕೆ ಸವಕಳಿಯನ್ನು ವಾರ್ಷಿಕ ದರದ ಅರ್ಧದ ದರದಲ್ಲಿ ಲೆಕ್ಕಹಾಕತಕ್ಕದ್ದು ಮತ್ತು ಕೊನೆಯ ಪೂರ್ಣಗೊಂಡ ಲೆಕ್ಕ ವರ್ಷದ ನಂತರ ನಿಹಿತಗೊಂಡ ದಿನಾಂಕದವರೆಗಿನ ಅವಧಿಗೆ ಸವಕಳಿಯನ್ನು ಅದೇ ಪ್ರಮಾಣದ ದರದಲ್ಲಿ ಲೆಕ್ಕಹಾಕತಕ್ಕದ್ದು. ಸವಕಳಿಯನ್ನು ಈ ಕೆಳಗೆ ನಿಯಮಿಸಲಾದಂತೆ ಆಸ್ತಿಯ ಬಾಳಿಕೆಯ ಅವಧಿಯನ್ನು ಮೀರಿದ ಯಾವುದೇ ಅವಧಿಗೆ ಲೆಕ್ಕಹಾಕತಕ್ಕದ್ದಲ್ಲ.

**ಕೋಷ್ಟಕ**

| ಆಸ್ತಿಗಳ ವಿವರ | | | ವರ್ಷಗಳ ಸಂಖ್ಯೆ ಅಥವಾ ಅವಧಿ |
|---|---|---|---|
| 1 | | | 2 |
| ಎ. ಪೂರ್ಣ ಹಕ್ಕಿನ ಅಡಿಯಲ್ಲಿ ಒಡೆತನ ಹೊಂದಿರುವ ಭೂಮಿ | .. | .. | ಪರಿಮಿತಿಯಿಲ್ಲದ್ದು |
| ಬಿ. ಗುತ್ತಿಗೆ ಅಡಿಯಲ್ಲಿ ಹೊಂದಿರುವ,– (ಎ) ಭೂಮಿಯ ಮೇಲೆ ಹೂಡಿಕೆಗಾಗಿ | .. | .. | ಗುತ್ತಿಗೆಯ ಅವದಿಯನ್ನು ಅಥವಾ ಗುತ್ತಿಗೆಯನ್ನು ಹಸ್ತಾಂತರಿಸಿದ ತರುವಾಯ ಮುಕ್ತಾಯವಾಗದೇ ಉಳಿದ ಅವಧಿ |
| (ಬಿ) ನಿವೇಶನ ಖಾಲಿ ಮಾಡಿದ ವೆಚ್ಚಕ್ಕಾಗಿ | .. | .. | ನಿವೇಶನವನ್ನು ಖಾಲಿ ಮಾಡಿದ ದಿನಾಂಕದಂದು ಮುಕ್ತಾಯವಾಗದೇ ಉಳಿದ ಗುತ್ತಿಗೆ ಅವಧಿ |
| ಸಿ. ಹೊಸದಾಗಿ ಖರೀದಿಸಿದ ಆಸ್ತಿಗಳು,– (ಎ) ಮೇಲೆ ನಮೂದಿಸಿರದ, ಖಾಯಂ ಸ್ವರೂಪದ ಕಟ್ಟಡ ಮತ್ತು ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳು | | | |
| (i) ಕಚೇರಿಗಳು ಮತ್ತು ಪ್ರದರ್ಶನ ಮಳಿಗೆಗಳು | .. | .. | ಐವತ್ತು |
| (ii) ಮರದ ರಚನೆಗಳಂಥ ತಾತ್ಕಾಲಿಕ ನಿರ್ಮಾಣಗಳು | .. | .. | ಐದು |
| (iii) ಇತರೆ | | | ಐವತ್ತು |
| (ಬಿ) ಟ್ರಾನ್ಸ್ ಫಾರ್ಮರ್, ಟ್ರಾನ್ಸ್ ಫಾರ್ಮರ್ ಕಿಯಾಸ್ಕು, ಉಪ–ಕೇಂದ್ರದ ಸಲಕರಣೆ ಮತ್ತು ಇತರ ಸ್ಥಿರ ಉಪಕರಣಗಳು (ಸ್ಥಾವರದ ಅಡಿಪಾಯಗಳೂ ಸೇರಿದಂತೆ) | | | |

| | | |
|---|---|---|
| (i) 100 ಕಿ.ವ್ಯಾ ಆಂಪೇರುಗಳು ಮತ್ತು ಅದಕ್ಕೂ ಹೆಚ್ಚಿನ ಸಾಮರ್ಥ್ಯವಿರುವ ಟ್ರಾನ್ಸ್ ಫಾರ್ಮರುಗಳು (ಅಡಿಪಾಯಗಳೂ ಸೇರಿದಂತೆ) | ... ... | ಮೂವತ್ತೈದು |
| (ii) ಇತರೆ | ... ... | ಇಪ್ಪತ್ತೈದು |
| (ಸಿ) ಸ್ವಿಚ್‌ಗೇರ್, ಕೇಬಲ್ ಸಂಪರ್ಕಗಳೂ ಸೇರಿದಂತೆ | ... ... | ಇಪ್ಪತ್ತು |
| (ಡಿ) ಬ್ಯಾಟರಿಗಳು | ... ... | ಹತ್ತು |
| (ಇ) (1) ಭೂಮಿಯೊಳಗೆ ಅಳವಡಿಸಿರುವ ಕೇಬಲ್‌ಗಳು, ಜಾಯಿಂಟ್ ಬಾಕ್ಸ್ ಮತ್ತು ಸಂಪರ್ಕ ತಪ್ಪಿಸುವ ಪೆಟ್ಟಿಗೆಗಳೂ ಸೇರಿದಂತೆ | ... ... | ನಲವತ್ತು |
| (2) ಕೇಬಲ್ ಡಕ್ಟ್ ಸಿಸ್ಟಂ | | ಅರವತ್ತು |
| (ಎಫ್) ಆಧಾರ ಸ್ಥಂಬಗಳೂ ಸೇರಿ ಮೇಲ್ಭಾಗದ ಲೈನ್‌ಗಳು | | |
| (i) 13.2 ಕಿ.ವ್ಯಾ ಸಾಮರ್ಥ್ಯಕ್ಕೂ ಹೆಚ್ಚಿನ ನಾಮಿನಲ್ ವೋಲ್ಟೇಜ್‌ನಲ್ಲಿ ಕಾರ್ಯನಿರ್ವಹಿಸುವ ಲೈನ್‌ಗಳು ಅಥವಾ ಸ್ಟೀಲ್ ಅಥವಾ ಬಲಪಡಿಸಿದ ಕಾಂಕ್ರೀಟ್‌ನ ಆಧಾರಸ್ಥಂಬಗಳು | ... ... | ಮೂವತ್ತು |
| (ii) ಸ್ಟೀಲ್ ಅಥವಾ ಬಲಪಡಿಸಿದ ಕಾಂಕ್ರೀಟ್‌ನ ಆಧಾರ ಸ್ಥಂಬಗಳ ಮೇಲಿನ ಇತರ ಲೈನ್‌ಗಳು | ... ... | ಇಪ್ಪತ್ತೈದು |
| (iii) ಮರದ ಆಧಾರ ಸ್ಥಂಬಗಳ ಮೇಲಿನ ಲೈನುಗಳು | ... ... | ಇಪ್ಪತ್ತು |
| (ಜಿ) ಮೀಟರ್‌ಗಳು | ... ... | ಹದಿನೈದು |
| (ಎಚ್) ಸ್ವ–ಪ್ರವರ್ತಕ ವಾಹನಗಳು | ... ... | ಏಳು |
| (ಐ) ಕೇಂದ್ರದ ಯಂತ್ರದ ಸಲಕರಣೆಗಳು | ... ... | ಇಪ್ಪತ್ತು |
| (ಜೆ) (i) ಕಚೇರಿ ಪೀಠೋಪಕರಣ ಮತ್ತು ಜೋಡಣೆಗಳು | ... ... | ಇಪ್ಪತ್ತು |
| (ii) ಕಚೇರಿ ಸಲಕರಣೆ | ... ... | ಹತ್ತು |
| (ಕೆ) ಬಾಡಿಗೆಗೆ ಕೊಟ್ಟ ಸಲಕರಣೆ,– | | |
| (i) ಮೋಟಾರ್‌ಗಳನ್ನು ಹೊರತುಪಡಿಸಿ | ... ... | ಏಳು |
| (ii) ಮೋಟಾರ್‌ಗಳು | ... ... | ಇಪ್ಪತ್ತು |

| | | |
|---|---|---|
| ಡಿ. ಖರೀದಿಸಿದ ಹಳೆಯ ಆಸ್ತಿಗಳು ಮತ್ತು ಈ ಕೋಷ್ಟಕದಲ್ಲಿ ಅನ್ಯಥಾ ತಿಳಿಸಿರದ ಆಸ್ತಿಗಳು | ... ... | ಸರ್ಕಾರವು ಇವುಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಅವುಗಳ ಸ್ವರೂಪ, ಬಾಳಿಕೆ ಮತ್ತು ಪರಿಸ್ಥಿತಿಯನ್ನು ಪರಿಗಣಿಸಿ ಪ್ರತಿಯೊಂದು ವಸ್ತುವಿನ ವಿಷಯದಲ್ಲಿ ಸರ್ಕಾರವು ನಿರ್ಣಯಿಸಬಹುದಾದಂಥ ಯುಕ್ತ ಅವಧಿ. |

**ಅಧಿಸೂಚನೆ**

**ಬೆಂಗಳೂರು, ದಿನಾಂಕ 18.12.1974 [ಸಂ. ಪಿಡಬ್ಲ್ಯುಡಿ 17 ಇಐಜಿ 73]**

**ಎಸ್.ಓ. 2591.–** ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ಉದ್ಯಮಗಳ (ಸ್ವಾಧೀನತೆ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 36)ರ 1ನೇ ಪ್ರಕರಣದ (3)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1974ರ ಡಿಸೆಂಬರ್ 18ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ, ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್. ವರದನ್,**
ಲೋಕೋಪಯೋಗಿ ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

The above translation of the Karnataka Electricity Supply Undertakings (Acquisition) Act,1974 (36 of 1974) shall be authoritative text in the Kannada Language under section 5A of the Karnataka Official Language Act, 1963

Governor of Karnataka
ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,
**ಜಿ.ಕೆ. ಬೋರೇಗೌಡ**

ಪಿ.ಆರ್. 1341

ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.